
# ಗೃಹಪ್ರವೇಶ



ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573211
2007

## ದಿ. ವೇ|| ಹೆಚ್.ಎಸ್. ಲಕ್ಷ್ಮಿನರಸಿಂಹಮೂರ್ತಿಗಳಿಂದ ಕಾರ್ಯಾಲಯದ ಮೂಲಕ ಪ್ರಕಾಶನಗೊಂಡಿರುವ ಗ್ರಂಥಗಳು

ಪುಟಗಳು

### 1. ವೇದಸಾಹಿತ್ಯಪ್ರಿಯರಿಗೆ : (ಕರ್ಮಕಾಂಡದಲ್ಲಿ ಶ್ರದ್ಧಾವಂತರಿಗೆ)

1. ರುದ್ರಭಾಷ್ಯ ಪ್ರಕಾಶ : (ನಮಸ್ತೇ ರುದ್ರ - ಎಂಬ ವೇದಭಾಗದ ಲಲಿತವಾದ ಕನ್ನಡ ವಿವರಣೆ) 156
2. ಚಮಕಾಧ್ಯಾಯಭಾಷ್ಯ (ಚ ಮೇ - ಎಂಬ ವೇದಭಾಗದ ಸರಳ ವ್ಯಾಖ್ಯಾನ) 82
3. ಪುರುಷಸೂಕ್ತಭಾಷ್ಯ : (ಸಹಸ್ರಶೀರ್ಷಾ - ಎಂಬ ಸೂಕ್ತದ ಅರ್ಥ ವಿವರಣೆ) 107
4. ಶ್ರೀಸೂಕ್ತಭಾಷ್ಯ : (ಹಿರಣ್ಯವರ್ಣಾಂ - ಎಂಬ ಸೂಕ್ತದ ಅರ್ಥ) 62
5. ವಿಷ್ಣುಸೂಕ್ತಭಾಷ್ಯ : (ಋಗ್ವೇದದ ವಿಷ್ಣುಸೂಕ್ತದ 45 ಋಕ್ಕುಗಳ ಅರ್ಥ ವಿವರಣೆ, - ನಾರಾಯಣ ಸೂಕ್ತಭಾಷ್ಯ ಸಮೇತ) 107
6. ಸೌರಸೂಕ್ತಭಾಷ್ಯ : (ಋಗ್ವೇದದ ಸೌರಸೂಕ್ತದ 64 ಋಕ್ಕುಗಳ ಅರ್ಥ ವಿವರಣೆ) 104

### 2. ಪುರಾಣ ಸ್ತೋತ್ರ ಪ್ರಿಯರಿಗೆ (ಭಕ್ತಿ ಪ್ರಧಾನರಾದ ಸಾಧಕರಿಗೆ)

7. ಅಧ್ಯಾತ್ಮ ರಾಮಾಯಣ : (ಸಂಪೂರ್ಣ ಮೂಲ, ಭಾವಾರ್ಥ ಸಹಿತ) 612
8. ಅಧ್ಯಾತ್ಮ ಶಂಕರವಿಜಯ : (ಶಂಕರರ ಜೀವನಚರಿತ್ರೆ) 188
9. ಶ್ರೀಗುರುಚರಿತಾಮೃತ : (ಶ್ರೀ ಶ್ರೀಗಳವರ ಜೀವನ ಚರಿತ್ರೆ ಮತ್ತು ಕಾರ್ಯಾಲಯದ ಇತಿಹಾಸ) 234
10. **ಸ್ತೋತ್ರಮಾಲಾ - ಭಾಗ 1, ಪಂಚರತ್ನಗಳು :** (1) ಭೀಷ್ಮಸ್ತವರಾಜ (2) ಹರಿಶರಣಾಷ್ಟಕ (3) ಅನುಸ್ಮೃತಿ (4) ಗಜೇಂದ್ರಮೋಕ್ಷ (5) ಆದಿತ್ಯಹೃದಯ 103
11. **ಸ್ತೋತ್ರಮಾಲಾ - ಭಾಗ-2 :** ಗಣಪತಿ ಸ್ತೋತ್ರಗಳು, 11 ಶಿವಸ್ತೋತ್ರಗಳು 2 ವಿಷ್ಣು ಸ್ತೋತ್ರಗಳು - ಪಾಂಡವಗೀತೆ ಸಹಿತ) 84
12. ಶಿವಾಪರಾಧಕ್ಷಮಾಪಣಾ ಸ್ತೋತ್ರ : (ವಿವರಣೆ ಸಹಿತ) 38
13. ಭಗವನ್ನಾಮಚಂದ್ರಿಕೆ : (ಅಷ್ಟೋತ್ತರಗಳ ಸಂಗ್ರಹ) 52
14. ಸನತ್ಸುಜಾತೀಯಮ್ : (ಪ್ರಕರಣಗಳು ಸಂಪುಟ 7) ಮಹಾಭಾರತಾಂತರ್ಗತ ಸನತ್ಸುಜಾತೀಯ ಶಾಂಕರಭಾಷ್ಯ ಅನುವಾದ ಸಹಿತ 254

*ರಕ್ಷಾಕವಚದ ಮರು ಹಾಳೆಯಲ್ಲಿ ಮುಂದುವರೆದಿದೆ.*

ಅಧ್ಯಾತ್ಮ ಗ್ರಂಥಾವಳಿ

# ಗೃಹಪ್ರವೇಶ

ಬರೆದವರು:

ಅಧ್ಯಾತ್ಮವಿದ್ಯಾಪ್ರವೀಣ

**ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೭೭

**ಪ್ರಕಾಶಕರು :**

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573 211

✆ 08175-273820

**2007**

| | | | | |
|---|---|---|---|---|
| ಮೊದಲನೆಯ ಸಂಸ್ಕರಣ | - | 1978 | - | 1000 |
| ಎರಡನೆಯ ಸಂಸ್ಕರಣ | - | 1989 | - | 1000 |
| ಮೂರನೆಯ ಸಂಸ್ಕರಣ | - | 1997 | - | 1000 |
| ನಾಲ್ಕನೆಯ ಸಂಸ್ಕರಣ | - | 2007 | - | 2000 |

ಪುಟಗಳು : 4+42

ಬೆಲೆ : ರೂ. 10/-

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ :
ಶ್ರೀಮತಿ ಸುಧಾ
ನರಸಿಂಹರಾಜಾ ಕಾಲೋನಿ
ಬೆಂಗಳೂರು - 560 019
ದೂರವಾಣಿ : 6599 0721

ಮುದ್ರಣ :
ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್
ನಂ. 76, 6ನೇ ಮುಖ್ಯರಸ್ತೆ, 3ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ : 26766342, 98453 47095

# ಮುನ್ನುಡಿ

ಈ ಪುಸ್ತಕವನ್ನು ಚಿಕ್ಕಮಗಳೂರಿನಲ್ಲಿರುವ ಕಾಫೀಪ್ಲಾಂಟರ್ ಶ್ರೀ ಎಂ.ಜಿ. ಕೋದಂಡ ರಾಮಶ್ರೇಷ್ಠಿಯವರ ಸೂಚನೆಯಂತೆ 1978ರಲ್ಲಿ ಅವರು ನೂತನವಾಗಿ ನಿರ್ಮಿಸಿದ 'ಧರ್ಮದೀಪ' ಎಂಬ ಗೃಹದ ಪ್ರವೇಶೋತ್ಸವದ ಸವಿನೆನಪಾಗಿ ಪ್ರಕಟಿಸಲಾಗಿತ್ತು. ಆಗ್ಗೆ ಈ ಗ್ರಂಥದ ಮುದ್ರಣವೆಚ್ಚವನ್ನು ಶ್ರೀಯುತರೇ ಭರಿಸಿದ್ದರು. ಕೆಲವು ಪ್ರತಿಗಳನ್ನು ಕಾರ್ಯಾಲಯದ ಮೂಲಕವೂ ಪ್ರಕಾಶಗೊಳಿಸಲಾಗಿತ್ತು.

ಅನೇಕ ಆಸ್ತಿಕಮಹನೀಯರು ಈ ಗ್ರಂಥದಲ್ಲಿರುವ ವಿಷಯಗಳಿಂದ ಆಕರ್ಷಿತರಾಗಿ ಪ್ರತಿಗಳನ್ನು ಕೊಂಡು ಪ್ರೋತ್ಸಾಹಿಸಿದ್ದರಿಂದ ಮೊದಲನೆಯ, ಎರಡನೆಯ ಮತ್ತು ಮೂರನೆಯ ಮುದ್ರಣದ ಪ್ರತಿಗಳೆಲ್ಲ ಮಾರಾಟವಾಗಿಬಿಟ್ಟಿದ್ದರಿಂದ ಈಗ ನಾಲ್ಕನೆಯ ಮುದ್ರಣವನ್ನು ಹೊರತರಲಾಗಿದೆ.

ಇದರಲ್ಲಿ ಅಧ್ಯಾತ್ಮದೃಷ್ಟಿಯಿಂದ ವಿಷಯವನ್ನು ಪ್ರಸ್ತಾಪಮಾಡಿ ಪ್ರವೇಶ ಶಬ್ದಾರ್ಥವನ್ನೂ ವಿವರಿಸಿ ಅನಂತರ ಗೃಹದಲ್ಲಿದ್ದುಕೊಂಡಿರುವ ಯಜಮಾನ ಮತ್ತು ಪತ್ನಿಯ ಮಹತ್ತ್ವವನ್ನೂ ಆದರ್ಶ ಗೃಹಸ್ಥಧರ್ಮವನ್ನೂ ತಿಳಿಯಿಸಿಕೊಟ್ಟು ಅನಂತರ ಗೃಹಪ್ರವೇಶಸಮಾರಂಭದ ವಿಸ್ತಾರವಾದ ವಿವರಣೆಯನ್ನು ಕೊಟ್ಟು ಉಪಸಂಹಾರ ಮಾಡಿದೆ. ಹೀಗೆ ತತ್ತ್ವ, ಧರ್ಮ, ಕರ್ತವ್ಯಗಳನ್ನು ಸೋಪಾನಕ್ರಮದಿಂದ ತಿಳಿಸಲಾಗಿದೆ.

ಈ ಕೆಳಗೆ ಸೂಚಿಸಿರುವ ಮಹನೀಯರುಗಳು ಗ್ರಂಥಪ್ರಕಟಣೆಗೆ ಸಹಾಯ ಮಾಡಿರುತ್ತಾರೆ.

| | | | |
|---|---|---|---|
| 1) | ಶ್ರೀ ನಾಗೇಂದ್ರ, ಬೆಂಗಳೂರು | ರೂ. | 1000 |
| 2) | ಶ್ರೀ ಹೆಚ್. ಕೆ. ಚಂದ್ರಶೇಖರ್, ಬೆಂಗಳೂರು (ತಮ್ಮ ತಂದೆ ಹೆಚ್. ಕೃಷ್ಣಮೂರ್ತಿಗಳ ನೆನಪಿಗಾಗಿ) | ರೂ. | 500 |
| 3) | ಅಂತರಂಗ ಭಕ್ತರು | ರೂ. | 200 |

ಉದಾರವಾಗಿ ಸಹಾಯಮಾಡಿದ ಭಕ್ತರೆಲ್ಲರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು.

ಮಹಾಜನರು ಎಂದಿನಂತೆ ಈ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ತಾ|| 20-5-2007 ಪ್ರಕಾಶಕರು.

# ವಿಷಯಾನುಕ್ರಮಣಿಕೆ


| | ವಿಷಯ | ಪುಟ |
|---|---|---|
| 1. | ಸ್ವಸ್ತಿವಾಚನ | 1 |
| 2. | ಪುರಃ ಪುರುಷ ಆವಿಶತ್ | 1 |
| 3. | ತತ್ಸೃಷ್ಟ್ವಾ । ತದೇವಾನುಪ್ರಾವಿಶತ್ । | 5 |
| 4. | ತಂ ನ ಪಶ್ಯನ್ತಿ | 8 |
| 5. | ಧನ್ಯೋ ಗೃಹಸ್ಥಾಶ್ರಮಃ | 11 |
| 6. | ಕುರ್ವನ್ನೇವೇಹ ಕರ್ಮಾಣಿ | 16 |
| 7. | ಶ್ರೀಯಾ ವಾ ಏತದ್ರೂಪಮ್ । ಯತ್ಪತ್ನಯಃ । | 17 |
| 8. | ಮಾತೃದೇವೋ ಭವ | 20 |
| 9. | ಗೃಹಾನ್ ಭದ್ರಾನ್ ಸುಮನಸಃ ಪ್ರಪದ್ಯೇ | 22 |
| 10. | ನ ಕಂಚನ ವಸತೌ ಪ್ರತ್ಯಾಚಕ್ಷೀತ | 24 |
| 11. | ಗೃಹ್ಯಕರ್ಮಗಳು | 25 |
| 12. | ಶಿವಂ ವಾಸ್ತು | 27 |
| 13. | ಪಿತೇವ ಪುತ್ರಾನ್ ಪ್ರತಿ ನೋ ಜುಷಸ್ವ | 28 |
| 14. | ಬಲಿಮಾಹರನ್ತಿ | 36 |
| 15. | ಪ್ರವೇಶೋತ್ಸವ | 37 |
| 16. | ಉಪಸಂಹಾರ | 40 |
| 17. | ಗೃಹಸ್ಥಪ್ರಶಂಸಾ | |

॥ ಓಮ್ ॥

# ಗೃಹ ಪ್ರವೇಶ

ಯಸ್ಯೋದರಗೃಹೋದ್ದೇಶೇ ನಿವಸನ್ತಿ ಜಗನ್ತ್ಯಹೋ ।
ಸವಿಕಾಸಂ ನಮಸ್ತಸ್ಮೈ ಕಸ್ಮೈಚಿನ್ಮಹಸೇ ನಮಃ ॥
ಭಗವಾನಸ್ತು ವೋ ಭೂತ್ಯೈ ಯದಾವಿರ್ಭಾವವೈಭವೇ ।
ಭವನೇಷು ಬಲಾರಾತೇಃ ಬಭೂವ ಸ್ವಸ್ತಿವಾಚನಮ್ ॥

## 1. ಸ್ವಸ್ತಿವಾಚನ

ಯಾವ ಭಗವಂತನ ಹೊಟ್ಟೆಯೆಂಬ ಗೃಹದಲ್ಲಿ ವಿಸ್ತಾರದಿಂದೊಡಗೂಡಿದ ಹದಿನಾಲ್ಕು ಲೋಕಗಳು ಇದ್ದು ಕೊಂಡಿರುವವೋ ಅಂಥ ಅಪೂರ್ವವಾದ ತೇಜೋಮಯವಾದ ಸ್ವರೂಪಕ್ಕೆ ನಮಸ್ಕಾರವು.

ದೇವೇಂದ್ರನ ಅರಮನೆಯಲ್ಲಿ ಯಾವನ ಜನ್ಮಮಹೋತ್ಸವಸಮಯದ ಸಂದರ್ಭದಲ್ಲಿ ಸ್ವಸ್ತಿವಾಚನವು ನಡೆಯುತ್ತಿತ್ತೋ ಅಂಥ ಭಗವಂತನು ನಿಮ್ಮ ಐಶ್ವರ್ಯ, ಯಶಸ್ಸು- ಮುಂತಾದ ಅಭ್ಯುದಯಗಳಿಗೆ ಕಾರಣವಾಗಲಿ !

## 2. ಪುರಃ ಪುರುಷ ಆವಿಶತ್

ಬ್ರಹ್ಮವಿದ್ಯಾಸಂಪ್ರದಾಯಕರ್ತೃಗಳಾದ ಮಹರ್ಷಿಗಳಿಗೆ ವಂದನೆಗಳು ! ಭರತಖಂಡದ ಭಾಗ್ಯನಿಧಿಗಳೆನಿಸಿರುವ, ವೈದಿಕವಾಙ್ಮಯಕ್ಕೆ ಸೇರಿರುವ ಪೂಜ್ಯಗ್ರಂಥಗಳಲ್ಲಿ ಉಪನಿಷತ್ತುಗಳಿಗೆ ಅಗ್ರಸ್ಥಾನವಿದೆ. ಶ್ರುತಿಶಿರಸ್ಸುಗಳೆಂದು ಹೊಗಳಲ್ಪಟ್ಟಿರುವ ಈ ವಾಙ್ಮಯಗಳಲ್ಲಿ ಪ್ರಾಚೀನರಾದ ತತ್ತ್ವಬೋಧಕರಾದ ಮಹರ್ಷಿಗಳು ತಮ್ಮ ಅನುಭವವಾಣಿಯಿಂದ ಇಡಿಯ ಪ್ರಪಂಚದ ತಿರುಳಾದ ಅಧ್ಯಾತ್ಮವಿದ್ಯೆಯನ್ನು ಪ್ರಕಟಗೊಳಿಸಿರುತ್ತಾರೆ. ಸುಪ್ರಸಿದ್ಧವಾಗಿರುವ ಹತ್ತು

ಉಪನಿಷತ್ತುಗಳಿಗೆ ಶ್ರೀಶಂಕರಭಗವತ್ಪಾದರೇ ಮುಂತಾದ ಆಚಾರ್ಯಪುರುಷರು ಭಾಷ್ಯಗಳೆಂಬ ಹೆಸರಿನ ವ್ಯಾಖ್ಯಾನಗಳನ್ನೂ ಬರೆದಿದ್ದಾರೆ. ಇಂಥ ಉಪನಿಷತ್ತುಗಳಲ್ಲಿ ಬೃಹದಾರಣ್ಯಕೋಪನಿಷತ್ತೆಂಬುದೂ ಒಂದಾಗಿದೆ. ಮೇಲಿನ ವಾಕ್ಯವನ್ನು ಈ ಸಂದರ್ಭಕ್ಕೆ ತಕ್ಕಂತೆ ಆ ಉಪನಿಷತ್ತಿನಿಂದ ಆರಿಸಿಕೊಳ್ಳಲಾಗಿದೆ.

ಉಪನಿಷತ್ತುಗಳಲ್ಲಿ ಪುರುಷ ಎಂಬ ಶಬ್ದದಿಂದ ಭಗವಂತನನ್ನು ಕರೆದಿರುತ್ತದೆ. ಇದರ ಅರ್ಥವು ಗಂಭೀರವಾದದ್ದು. "ಪುರಿ - ಶಯನಾತ್ ಪುರುಷಃ" ಎಂದು ಇದರ ಅಭಿಪ್ರಾಯವನ್ನು ವಿವರಿಸಲಾಗಿದೆ. ಪುರ-ಎಂದರೆ ಊರು ಅಥವಾ ಪಟ್ಟಣ. ಅದರಲ್ಲಿ ಇದ್ದುಕೊಂಡಿರುವವನಿಗೆ ಪುರುಷನೆಂದು ಹೆಸರು. ವ್ಯವಹಾರದಲ್ಲಿ ಪುರುಷನೆಂದರೆ ಗಂಡಸೆಂದೂ ಸ್ತ್ರೀ ಎಂದರೆ ಹೆಂಗಸೆಂದೂ ನಾವು ತಿಳಿದಿರುವ ಸಂಕುಚಿತವಾದ ಅರ್ಥವನ್ನು ಉಪನಿಷತ್ತಿನಲ್ಲಿ ಅಂಗೀಕರಿಸಿರುವದಿಲ್ಲ. ಅಲ್ಲಿ ಪುರುಷನೆಂದರೆ ಪುರಗಳೆಂಬ ಶರೀರಗಳಲ್ಲಿ ಇದ್ದುಕೊಂಡಿರುವ ಚೈತನ್ಯರೂಪನಾದ ಆತ್ಮನು-ಎಂದೇ ಅರ್ಥ. ಇದು ಹೆಚ್ಚು ವ್ಯಾಪಕವಾದ ಅರ್ಥವು. ಭಗವಂತನು ವಾಸಿಸುವ ಪುರಗಳು ಎರಡು ವಿಧವಾಗಿವೆ. ಎರಡು ಕಾಲಿನ ಮತ್ತು ನಾಲ್ಕು ಕಾಲಿನ ಪುರಗಳೇ ಅವು. ನಾಲ್ಕಕ್ಕೂ ಹೆಚ್ಚು ಕಾಲುಗಳಿದ್ದರೂ ಅವೂ ನಾಲ್ಕು ಎಂಬುವದರಲ್ಲೇ ಸೇರಿ ಹೋಗಿವೆ. ಹೀಗೆ ಎಲ್ಲಾ ಪ್ರಾಣಿಗಳ ಶರೀರಗಳೆಂಬ ಪುರಗಳಲ್ಲಿಯೂ ಆತ್ಮರೂಪದಿಂದ ಇದ್ದುಕೊಂಡು ಅನುಗ್ರಹಿಸುತ್ತಿರುವ ಭಗವಂತನೊಬ್ಬನೇ ನಿಜವಾದ ಅರ್ಥದಲ್ಲಿ ಪುರುಷನಾಗಿರುತ್ತಾನೆ. ಪುರುಷ ಏವೇದಂ ವಿಶ್ವಮ್ ಎಂದು ಮತ್ತೊಂದು ಉಪನಿಷದ್ವಾಕ್ಯವೂ ಹೀಗೆಂದೇ ತಿಳಿಸುತ್ತಿದೆ.

ಈಗ ಪುರ-ಪುರುಷರುಗಳಲ್ಲಿ ಪ್ರಾಧಾನ್ಯವು ಯಾವದಕ್ಕೆಂಬುದನ್ನು ನೋಡೋಣ. ವ್ಯವಹಾರದಲ್ಲಿಯೂ ಒಂದು ಹೊಸಮನೆಯನ್ನು ನಿರ್ಮಾಣ ಮಾಡಿದಾಗ ಮನೆಯ ಯಜಮಾನನಿಗೂ ಮನೆಗೂ ಹೋಲಿಸಿದರೆ ಯಜಮಾನನು ಚೇತನನು ; ಸ್ವತಂತ್ರನು. ಮನೆಯು ಅಚೇತನ, ಅಸ್ವತಂತ್ರವು.

ಆದ್ದರಿಂದ ಅಚೇತನವು ಯಾವಾಗಲೂ ಚೇತನದ ಪ್ರಯೋಜನಕ್ಕಾಗಿಯೇ ಇದ್ದುಕೊಂಡಿರುವದು. ಗೃಹವು ಗೃಹಸ್ವಾಮಿಗಾಗಿ ಇದ್ದುಕೊಂಡಿದೆ-ಎಂದರೆ ಗ್ರಹದಲ್ಲಿರುವ ಗೃಹಪತಿಗೇ ಪ್ರಾಧಾನ್ಯವು. ಇದರಂತೆಯೇ ಇನ್ನೂ ಸ್ಥೂಲವಾದ ದೃಷ್ಟಾಂತವೊಂದನ್ನು ಕೊಡಬಹುದು. ದೇವಾಲಯವು ಇರುವುದು ದೇವರಿಗಾಗಿ ; ಮತ್ತು ದೇವರನ್ನು ಸ್ಥಾಪಿಸುವದಕ್ಕಾಗಿಯೇ ದೇವಾಲಯವನ್ನು ಕಟ್ಟುತ್ತಾರೆ. ಹಾಗೆ ಯಜಮಾನನಿಗಾಗಿ ಗೃಹವಿದೆ. ಅದರಂತೆ ಶರೀರಗಳೆಂಬ ಗೃಹಗಳು ಇದ್ದುಕೊಂಡಿರುವದು ಆತ್ಮನಿಗಾಗಿ ; ಇಲ್ಲಿ ಆತ್ಮನೇ ಯಜಮಾನನು, ಪ್ರಭುವು, ಒಡೆಯನೂ ಆಗಿದ್ದಾನೆ. ಈ ಆತ್ಮನನ್ನೇ ಉಪನಿಷತ್ತುಗಳಲ್ಲಿ ಪುರುಷನೆಂದು ಕರೆದಿರುತ್ತದೆ. ಪುರುಷನಿಲ್ಲದ ಪುರಗಳಿಗೆ ಬೆಲೆಯಿಲ್ಲ. ಆದರೆ ಆ ಪುರುಷನು ತಾನೊಬ್ಬನೇ ಸ್ವತಂತ್ರನಾಗಿ ತೋರಿಕೊಳ್ಳುವದಿಲ್ಲ ; ಅವನಿಗೆ ಯಾವ ನಾಮರೂಪಗಳೂ ಇಲ್ಲದ್ದೇ ಇದಕ್ಕೆ ಕಾರಣವು. ಆದ್ದರಿಂದ ಪುರಗಳಲ್ಲಿ ಕಂಡುಬರುವ ಈ ಪುರುಷನ ತತ್ತ್ವವನ್ನು ಅರಿತುಕೊಳ್ಳುವದು ಹೆಚ್ಚಿನ ಪ್ರಯೋಜನಕಾರಿಯಾಗಿದೆ. ಹಾಗೆಯೇ ಪುರದ ಸ್ವರೂಪವನ್ನೂ ತಿಳಿದುಕೊಳ್ಳ ಬೇಕಾಗಿದೆ. ಈಗ ಒಂದೊಂದಾಗಿ ವಿಚಾರ ಮಾಡೋಣ.

ಪುರುಷನು ವಾಸಿಸುವ ಈ ಪುರವನ್ನು ವೇದದಲ್ಲಿ ಹೀಗೆ ವರ್ಣಿಸಿದೆ:-

ಅಷ್ಟಾ ಚಕ್ರಾ ನವ ದ್ವಾರಾ । ದೇವಾನಾಂ ಪೂರಯೋಧ್ಯಾ ।
ತಸ್ಯಾಗ್ಂ ಹಿರಣ್ಮಯಃ ಕೋಶಃ । ಸ್ವರ್ಗೋ ಲೋಕೋ ಜ್ಯೋತಿಷಾವೃತಃ ॥
ಯೋ ವೈತಾಂ ಬ್ರಹ್ಮಣೋ ವೇದ । ಅಮೃತೇನಾವೃತಾಂ ಪುರೀಂ ।
ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ । ಆಯುಃ ಕೀರ್ತಿಂ ಪ್ರಜಾಂ ದದುಃ ॥

ಈ ಪುರವು ದೇವತೆಗಳು ವಾಸಿಸುವಂಥದ್ದು. ದೇವತೆಗಳೆಂದರೆ ದ್ಯೋತನಾತ್ ದೇವಾಃ - ಎಂಬ ವ್ಯಾಖ್ಯಾನದಂತೆ ನಮಗೆ ವಿಷಯಗಳನ್ನು ಪ್ರಕಾಶಗೊಳಿಸುವ ಚಕ್ಷುರಾದಿ ಇಂದ್ರಿಯಗಳು. ನಮ್ಮ ಇಂದ್ರಿಯಗಳೆಲ್ಲ ದೇವತಾ ಮಯವಾಗಿರುವವು. ಇರಲಿ ; ಇನ್ನು ಈ ಪುರಕ್ಕೆ ಅಯೋಧ್ಯೆ-ಎಂದು ಹೆಸರು.

ಇದನ್ನು ಯುದ್ಧದಲ್ಲಿ ಗೆಲ್ಲುವದು ಸಾಧ್ಯವಾಗಲಾರದೆಂದೇ ಅಯೋಧ್ಯೆಯೆಂದೇ ಕರೆಯಲಾಗಿದೆ. ಇದಕ್ಕೆ ಎಂಟು ಕೋಟೆಗಳಿವೆ. ಚರ್ಮ, ರಕ್ತ, ಮಾಂಸಾದಿಗಳ ಪದರಗಳೇ ಆ ಕೋಟೆಗಳು. ಮತ್ತು ಈ ಪುರಕ್ಕೆ ಒಂಬತ್ತು ಬಾಗಿಲುಗಳಿವೆ. ಇದು ಎಲ್ಲರಿಗೂ ತಿಳಿದಿರುವ ವಿಚಾರವೇ. ತಲೆಯಲ್ಲಿ ಏಳು, ನಡುಭಾಗದಲ್ಲಿ ಎರಡು-ಹೀಗೆ ಹಂಚಿಕೊಂಡಿವೆ. ಇಂಥ ಪುರದಲ್ಲಿ ನಡುವೆ ಒಂದು ಚಿನ್ನದ ಕೋಣೆಯಿದೆ. ಅದು ನಿರತಿಶಯವಾದ ಆನಂದದಿಂದ ಕೂಡಿದೆ. ತೇಜೋಮಯ ವಾಗಿದೆ. ಹೀಗೆ ಅಮೃತದಿಂದ ಪರಿಪೂರ್ಣವಾಗಿರುವ ಆ ಬ್ರಹ್ಮದ ಪಟ್ಟಣವನ್ನು ಯಾವನು ಅರಿತುಕೊಳ್ಳವನೋ ಅವನಿಗೆ ಚತುರ್ಮುಖನಾದ ಹಿರಣ್ಯಗರ್ಭನೂ ಅವನಿಗೂ ಆತ್ಮನಾದ ಪರಬ್ರಹ್ಮವೂ ಆಯುಷ್ಯವನ್ನೂ ಕೀರ್ತಿಯನ್ನೂ ಪ್ರಜೆಗಳನ್ನೂ ಕೊಡುವರು -ಎಂದು ಇಲ್ಲಿ ಹೊಗಳಿದೆ. ಮತ್ತೊಂದು ಕಡೆ ಈ ಪುರಕ್ಕೆ ಹನ್ನೊಂದು ಬಾಗಿಲುಗಳಿವೆ. ಇದು ಅಜವಾದ ಬ್ರಹ್ಮದ ವಾಸಸ್ಥಾನವು - ಎಂದು ತಿಳಿಸಿರುತ್ತದೆ. ಸುಪ್ರಸಿದ್ಧವಾದ ಪೌರಾಣಿಕ ಶ್ಲೋಕವೊಂದರಲ್ಲಿ ಹೀಗೆದೆ :-

ದೇಹೋ ದೇವಾಲಯಃ ಪ್ರೋಕ್ತಃ ಜೀವೋ ದೇವಃ ಸನಾತನಃ ।
ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇತ್ ।।

ಈ ದೇಹವೇ ದೇವಾಲಯವು. ಜೀವನೇ ಸನಾತನನಾದ ದೇವನು. ಅಜ್ಞಾನವೆಂಬ ನಿರ್ಮಾಲ್ಯ (ಕೊಳಕನ್ನು) ತೆಗೆಯಬೇಕು. ಆಗ ಅವನೇ ನಾನು ಎಂಬುದು ತಿಳಿಯುವದು. ಈ ಭಾವನೆಯಿಂದ ಪೂಜಿಸಬೇಕು-ಎಂದು ಇಲ್ಲಿ ತಿಳಿಸಿದೆ. ಅಂತೂ ಶರೀರವನ್ನು ಪುರವೆಂದು ಕರೆದಿರುವದು ಅಧ್ಯಾತ್ಮಶಾಸ್ತ್ರಗಳಲ್ಲಿ ಸುಪ್ರಸಿದ್ಧವಾಗಿದೆ. ವ್ಯವಹಾರದೃಷ್ಟಿಯಿಂದ ಶರೀರವನ್ನೇ ನಾನು - ಎಂದು ಕರೆದುಕೊಂಡಿರುವೆವಾದ್ದರಿಂದ ಆ ನಾನು ಎಂಬ ವ್ಯಕ್ತಿಗೆ ಸಂಬಂಧಿಸಿದಂತೆ ನನ್ನದು -ಎಂಬ ಗೃಹವೊಂದು ಬೇರೆಯಾಗಿ ಇರಬೇಕಾಗುವದು. ಗೃಹದಲ್ಲಿದ್ದು ಕೊಂಡಿರುವವನೇ ಗೃಹಸ್ಥನೆನಿಸುವನು.

ಈಗ ಪುರ-ಪುರಷ ಇವರುಗಳ ತತ್ತ್ವವನ್ನು ಸಾಮಾನ್ಯವಾಗಿ ಅರಿತುಕೊಂಡ ಅನಂತರ 'ಪ್ರವೇಶ'ವನ್ನು ಕುರಿತು ವಿಚಾರಮಾಡೋಣ. ಪ್ರವೇಶವೆಂಬುದು ನಿಜವಾದ ಅರ್ಥದಲ್ಲಿ ಹೊಂದಬೇಕಾದರೆ ಒಂದು ಸ್ಥಳವನ್ನೋ, ಅಥವಾ ಮನೆಯನ್ನೋ, ಕುರಿತು ಹೋಗಿ ಅಲ್ಲಿ ಒಳಕ್ಕೆ ಹೋಗುವುದು-ಎಂದೇ ಅರ್ಥಮಾಡಬೇಕಾಗಿದೆ. ಆದರೆ ಉಪನಿಷತ್ತುಗಳು ತಿಳಿಸುವ ಪುರುಷನ ಸ್ವರೂಪವನ್ನು ನೋಡಿದರೆ ಮುಖ್ಯಾರ್ಥದಲ್ಲಿ ಪ್ರವೇಶವು ಹೊಂದುವದಿಲ್ಲ. ಏಕೆಂದರೆ ಸರ್ವವ್ಯಾಪಕನಾದ ಪುರುಷನು ಪ್ರವೇಶಮಾಡದೆ ಇರುವ ಜಾಗವೇ ಇರುವದಿಲ್ಲ. ಆದ್ದರಿಂದ ಪ್ರವೇಶದ ನಿಜವಾದ ಅಭಿಪ್ರಾಯವನ್ನು ತಿಳಿಯಬೇಕಾಗಿದೆ. ಉಪನಿಷದ್ವಾಕ್ಯದಲ್ಲಿ ಆವಿಶತ್ ಪ್ರವೇಶಿಸಿದನು - ಎಂಬ ಶಬ್ದವನ್ನೇ ಉಪಯೋಗಿಸಿದೆಯಾದ್ದರಿಂದ ಈ ವಿಷಯವು ವಿಚಾರಣೀಯವಾಗಿದೆ. ಈಗ ಇದನ್ನು ವಿಮರ್ಶೆಮಾಡೋಣ.

## 3. ತತ್ ಸೃಷ್ಟ್ವಾ । ತದೇವಾನುಪ್ರಾವಿಶತ್

ತೈತ್ತಿರೀಯೋಪನಿಷತ್ತಿನಲ್ಲಿರುವ ಈ ವಾಕ್ಯವು ನಮಗೆ ಸೃಷ್ಟಿ ಹಾಗೂ ಪ್ರವೇಶಗಳ ತತ್ತ್ವವನ್ನು ತಿಳಿಸುತ್ತಿದೆ. ಈ ಸಂದರ್ಭದಲ್ಲಿ ಶ್ರೀಶಂಕರಭಗವತ್ಪಾದರವರು ಪ್ರವೇಶವಿಷಯಕ್ಕೆ ಒಂದು ಚರ್ಚೆಯನ್ನು ಮುಂದಿಟ್ಟು ನಿರ್ಣಯವನ್ನು ತಿಳಿಸಿದ್ದಾರೆ. ಪುರುಷನನ್ನು ಸರಿಯಾಗಿ ಅರಿತುಕೊಳ್ಳಲು ಈ ಭಾಗವು ಪ್ರಯೋಜನಕಾರಿಯಾಗಿದೆ. ಆದ್ದರಿಂದ ಇಲ್ಲಿ ಇದರ ಸಂಕ್ಷಿಪ್ತ ವಿವರವನ್ನು ಕೊಡುವೆನು.

ಪ್ರವೇಶವೆಂಬುದು ಹೊಂದಬೇಕಾದರೆ ವಸ್ತುವು ಸಾವಯವವಾಗಿರಬೇಕು. ಹೇಗೆ ಮಣ್ಣು ತನ್ನ ಕಾರ್ಯವಾದ ಮಡಕೆಯಲ್ಲಿ ಒಳಹೊಕ್ಕಿರುವದೋ ಹಾಗೆ. ಆದರೆ ಬ್ರಹ್ಮವು ನಿರವಯವವಾಗಿದೆಯಲ್ಲ ? ಎಂದರೆ - ನಡುವೆ ಒಬ್ಬನು 'ಹಾಗಾದರೆ ಬ್ರಹ್ಮವನ್ನು ಸಾವಯವವೆಂದೇ ಒಪ್ಪೋಣ' ಎಂದನು. ಅದೂ ಸರಿಯಲ್ಲ. ಹಾಗೆ ಒಪ್ಪಿದರೂ ಬ್ರಹ್ಮವು ಸರ್ವವ್ಯಾಪಕವಾದ್ದರಿಂದ ಅದು

ಎಲ್ಲಿಗೆ ಪ್ರವೇಶಮಾಡಬೇಕು ? ಎಂಬ ಆಕ್ಷೇಪವು ಬರುತ್ತದೆ. ಹಾಗಾದರೆ ಸೂರ್ಯನ ಪ್ರತಿಬಿಂಬವು ನೀರಿನಲ್ಲಿ ಪ್ರವೇಶಮಾಡಿದಂತೆ ಎನ್ನೋಣವೆ ? ಎಂದರೆ ಅದೂ ಹೊಂದುವದಿಲ್ಲ. ಏಕೆಂದರೆ ಆತ್ಮನಿಗೆ ಆಕಾರವಿಲ್ಲ. ಆಕಾರ ವಿಲ್ಲದ ವಸ್ತುಗಳಿಗೆ ಪ್ರತಿಬಿಂಬವೂ ಇರುವಂತಿಲ್ಲ. ಹಾಗಾದರೆ ಒಳಗೆ, ಹೊರಗೆ-ಎಂಬ ಭೇದದಿಂದ ಪ್ರವೇಶವನ್ನು ಕಲ್ಪಿಸಬಹುದಲ್ಲ ? ಬ್ರಹ್ಮವು ಶರೀರಕ್ಕೆ ಆಧಾರವಾಗಿ ಹೊರಗಿದ್ದು ಕೊಂಡು ಒಳಗೆ ಜೀವಾತ್ಮ ರೂಪದಿಂದ ಪ್ರವೇಶಿಸಿದೆ ಎಂದು ಹೇಳಬಹುದಲ್ಲವೆ ? ಎಂದರೆ ಅದೂ ಸರಿಯಲ್ಲ. ಏಕೆಂದರೆ ಹೊರಗಿನ ವಸ್ತುವಿಗಾದರೆ ಅದು ಒಳಕ್ಕೆ ಪ್ರವೇಶ ಮಾಡುತ್ತದೆ - ಎಂದರೆ ಹೊಂದಬಹುದು. ಆದರೆ ಬ್ರಹ್ಮದಲ್ಲಿ ಒಳಗೆ-ಹೊರಗೆ ಎಂಬುದಿಲ್ಲವಲ್ಲ? ಹೇಗೆ ಒಬ್ಬನು ಮನೆಯನ್ನು ಕಟ್ಟಿದ ಅನಂತರ ಪ್ರವೇಶಮಾಡಿದನು - ಎಂದರೆ ಹೊಂದುತ್ತದೆಯೋ ಹಾಗೆ ಬ್ರಹ್ಮವು ಪ್ರವೇಶಮಾಡಿತು ಎಂದರೆ ಹೊಂದು ವದಿಲ್ಲ. ಏಕೆಂದರೆ ಬ್ರಹ್ಮದಲ್ಲಿ ಒಳಹೊರಗುಗಳೆಂಬ ಭೇದವಿಲ್ಲ. ಅದು ಅಖಂಡವಾದ ಅದ್ವಿತೀಯವಸ್ತುವಾಗಿದೆ. ಆದ್ದರಿಂದ ಹೇಗೂ ಹೊಂದದೆ ಇರುವದರಿಂದ ಪ್ರವೇಶ ಶ್ರುತಿಯು ನಿಷ್ಫಲವೆಂದೇ ಆಯಿತಲ್ಲ ? ಎಂದು ಆಕ್ಷೇಪಿಸಿ ನಿಜವಾದ ಉತ್ತರವನ್ನು ಹೀಗೆ ತಿಳಿಸಿದ್ದಾರೆ :-

ಪ್ರವೇಶವೆಂದರೆ ಇಲ್ಲಿ ಬ್ರಹ್ಮವು ಆಯಾ ಶರೀರಗಳಲ್ಲಿ ಆತ್ಮರೂಪದಿಂದ ತೋರಿಕೊಳ್ಳುವದು ಮಾತ್ರವೇ. ಅದನ್ನೇ ಉಪಚಾರಕ್ಕಾಗಿ ಪ್ರವೇಶವೆಂತ ಕರೆಯಲಾಗಿದೆ. ಹೇಗೆಂದರೆ ; ಬ್ರಹ್ಮವನ್ನು ಅರಿತುಕೊಂಡು ಮಾನವನು ಪರಮ ಪುರುಷಾರ್ಥವನ್ನು ಪಡೆಯಬೇಕಾಗಿದೆ. ಆ ಬ್ರಹ್ಮವು ಸತ್ಯಜ್ಞಾನಾನಂತವಾದ ರೂಪವಾಗಿದೆ. ಅದನ್ನು ನಮ್ಮ ನಮ್ಮ ಹೃದಯಗುಹೆಯಲ್ಲಿಯೇ ಕಂಡುಕೊಳ್ಳ ಬೇಕಾಗಿದೆ. ಅದಕ್ಕೆ ಉಪಾಯವಾಗಿ ಬ್ರಹ್ಮವನ್ನು ಗುರುತಿಸುವದಕ್ಕಾಗಿ ಈ ಸೃಷ್ಟಿಯನ್ನು ಹೇಳಿದೆ. ಸೃಷ್ಟಿಯೂ ಪ್ರವೇಶವೂ ನಿಜವಾಗಿಯೇ ಉಂಟಾಗಿವೆ-ಎಂಬುದರಲ್ಲಿ ಶ್ರುತಿಗೆ ತಾತ್ಪರ್ಯವಿಲ್ಲ. ಮತ್ತೇನೆಂದರೆ : ಬ್ರಹ್ಮತತ್ತ್ವದಲ್ಲಿ ಜಿಜ್ಞಾಸುವನ್ನು ನೆಲೆಗೊಳಿಸುವದಕ್ಕಾಗಿ ಈ ಸೃಷ್ಟಿಪ್ರವೇಶಗಳ ಕಥೆಯನ್ನು

ಉಪಾಯವಾಗಿ ಉಪಯೋಗಿಸಿದೆ. ಆದ್ದರಿಂದ ಬ್ರಹ್ಮವು ಸೃಷ್ಟಿಯಲ್ಲಿರುವ ಎಲ್ಲಾ ಚೇತನಾಚೇತನವಸ್ತುಗಳಲ್ಲಿಯೂ ಹೊರತೋರಿಕೊಳ್ಳುತ್ತಿರುವದೇ ಅದರ ಪ್ರವೇಶವು. ಹೀಗೆ ಹೇಳಿದ್ದರಿಂದ ಮತ್ತೊಂದು ಪ್ರಯೋಜನವು ಉಂಟು. ಯಾವನು ಸೃಷ್ಟಿಕರ್ತನೋ ಅವನೇ ಆ ಸೃಷ್ಟಿಯಲ್ಲಿ ಪ್ರವೇಶ ಮಾಡಿರುತ್ತಾನೆ ಎಂದು ತಿಳಿಸುವದರಿಂದ ಆ ಸೃಷ್ಟಿಕರ್ತನು ಪರೋಕ್ಷನಲ್ಲ ಎಂದಾಯಿತು. ಹೇಗೆ "ಭುಕ್ತ್ವಾ ವ್ರಜತಿ" ಊಟಮಾಡಿ ಹೊರಡುತ್ತಾನೆ-ಎಂಬಲ್ಲಿ ಯಾವನು ಊಟಮಾಡಿದನೋ ಅವನೇ ಹೊರಟನು-ಎಂಬರ್ಥ ವಾಗುವದು. ವ್ಯಾಕರಣ ಶಾಸ್ತ್ರದ ಪ್ರಕಾಕವೂ 'ಭುಕ್ತ್ವಾ' ಎಂಬಲ್ಲಿರುವ ಕ್ತ್ವಾ ಪ್ರತ್ಯಯವು ಭೋಜನ ಮತ್ತು ಗಮನ ಎಂಬ ಎರಡು ಕ್ರಿಯೆಗಳಿಗೂ ಒಬ್ಬನೇ ಕರ್ತೃವೆಂತ ತಿಳಿಸುತ್ತದೆ. ಹಾಗೆಯೇ 'ಸೃಷ್ಟ್ವಾ-ಪ್ರಾವಿಶತ್' ಎಂಬಲ್ಲಿಯೂ ಯಾವನು ಸೃಷ್ಟಿ ಮಾಡಿದನೋ ಅವನೇ ಪ್ರವೇಶಮಾಡಿದನು-ಎಂಬರ್ಥವು ಹೊರಡುತ್ತದೆ. ಇದು ಉಪನಿಷತ್ತುಗಳು ಜಗತ್ತಿಗೆ ನೀಡಿರುವ ಜ್ಞಾನಕಿರಣ ಗಳಲ್ಲೊಂದು. ಬೇರೆಯ ಮತಗಳವರು ಸೃಷ್ಟಿಕರ್ತನನ್ನು ದೇವರೆಂದು ಹೇಳುತ್ತಾ ರಾದರೂ ಆತನು ಎಲ್ಲಿಯೋ ಸ್ವರ್ಗದಲ್ಲಿರುತ್ತಾನೆ ಎಂದು ಪರೋಕ್ಷವಾಗಿ ಹೇಳುತ್ತಾರೆ. ಅವರ ಮತದಲ್ಲಿ ಆತನನ್ನು ನಂಬಿಕೆಯಿಂದಲೇ ನಾವು ಭಜಿಸ ಬೇಕಾಗಿದೆ. ಆದರೆ ಸನಾತನಧರ್ಮದಲ್ಲಿ ಹಾಗಿಲ್ಲ. ಆ ಸೃಷ್ಟಿಕರ್ತನೆಂಬುವನು ಬೇರಾರೂ ಅಲ್ಲ. ಈ ಸೃಷ್ಟಿಯಲ್ಲೆಲ್ಲ ಒಳಹೊಕ್ಕು ಒಂದೊಂದು ಪ್ರಾಣಿ ಯಲ್ಲಿಯೂ ಚೇತನಾ ಚೇತನಗಳಲ್ಲಿಯೂ ಅವನೇ ಜೀವರೂಪದಿಂದ ತೋರಿ ಕೊಳ್ಳುತ್ತಿದ್ದಾನೆ. ಅವನನ್ನು ಧೀರರಾದವರು ಒಂದೊಂದು ಭೂತದಲ್ಲಿಯೂ ಹುಡುಕಿ ಕಂಡುಕೊಳ್ಳುವರು - ಎಂದು ತಿಳಿಸುತ್ತಿದೆ. ಆದ್ದರಿಂದ ಪ್ರಯತ್ನ ಮಾಡಿದರೆ ಆ ಭಗವಂತನನ್ನು (ಸೃಷ್ಟಿಕರ್ತನನ್ನು) ನಾವು ಇಲ್ಲಿಯೇ ಈಗಲೇ ಬದುಕಿರುವಾಗಲೇ ಕಂಡುಕೊಂಡು ಕೃತಕೃತ್ಯರಾಗಬಹುದು - ಎಂಬ ಮಂಗಳಕರವಾದ ಸಿದ್ಧಾಂತವು ಸನಾತನ ಧರ್ಮದವರಿಗೊಬ್ಬರಿಗೇ ಮೀಸ ಲಾಗಿದೆ. ಪ್ರವೇಶದ ನೆಪದಿಂದ ಶ್ರುತಿಯು ಇಂಥ ಮಹತ್ತರವಾದ ವಿಚಾರವನ್ನು ನಮಗೆ ಬೋಧಿಸುತ್ತಿದೆ.

## 4. ತಂ ನ ಪಶ್ಯನ್ತಿ

ಈಗ ಇನ್ನೊಂದು ವಿಚಾರವನ್ನು ಪ್ರವೇಶಕ್ಕೆ ಸಂಬಂಧಿಸಿದಂತೆ ಮಾಡಬೇಕಾಗಿದೆ. ಭಗವಂತನು ಹೀಗೆ ಎಲ್ಲಾ ಪ್ರಾಣಿಗಳಲ್ಲಿಯೂ ಒಳಹೊಕ್ಕಿದ್ದರೂ ಅವನೇಕೆ ಕಂಡುಬರುತ್ತಿಲ್ಲ ? ಇದಕ್ಕೇನು ಕಾರಣ ? ಎಂದು ಆಕ್ಷೇಪಿಸಬಹುದಾಗಿದೆ. ಉತ್ತರವೇನೆಂದರೆ : ಭಗವಂತನನ್ನು ನಾವು ಕಾಣೆವು-ಎಂಬುದು ಅಜ್ಞಾನದಶೆಯಲ್ಲಿ ನಾವು ಹೇಳುತ್ತಿರುವ ಮಾತು. ಇದು 'ಹಗಲು ವೇಳೆಯಲ್ಲಿ ನಾವು ನಕ್ಷತ್ರಗಳನ್ನು ಕಾಣೆವು'-ಎಂದಂತೆ ಎಂದು ತಿಳಿಯಬೇಕು. ಏಕೆಂದರೆ ನಕ್ಷತ್ರಗಳು ಹಗಲಿನಲ್ಲಿಯೂ ಇದ್ದುಕೊಂಡೇ ಇರುವವು. ದೂರದರ್ಶಕ ಯಂತ್ರಗಳ ಸಹಾಯದಿಂದ ನೋಡಿದರೆ ಹಗಲಿನಲ್ಲಿಯೂ ಅವು ಕಂಡೇ ಕಾಣುವವು. ಆದರೆ ನಮ್ಮ ಕಣ್ಣಿಗೆ ಸೂರ್ಯನ ಪ್ರಭೆಯು ಹೆಚ್ಚಾಗಿ ವ್ಯಾಪಿಸಿದ್ದು ನಕ್ಷತ್ರಗಳು ಬಹುದೂರದಲ್ಲಿದ್ದುಕೊಂಡಿರುವದರಿಂದ ಅವು ಕಾಣದೆ ಹೋಗಿವೆ. ಹಾಗೆಯೇ ನಮ್ಮ ದೃಷ್ಟಿಯು ಬಾಹ್ಯವಿಷಯಗಳಲ್ಲಿಯೇ ನೆಟ್ಟಿದ್ದು, ನಮ್ಮ ಇಂದ್ರಿಯಗಳೂ ಹೊರಮುಖವಾಗಿಯೇ ಪ್ರವರ್ತಿಸುತ್ತಿವೆಯಾದ್ದರಿಂದ ಅವುಗಳ ಮೂಲಕ ನಾವು ನೋಡಿದರೆ ಆ ಭಗವಂತನು ಕಾಣುವದಾದರೂ ಎಂತು ? ಆದ್ದರಿಂದ ಅವನನ್ನು ನೋಡಬೇಕಾದರೆ ಪ್ರತ್ಯಕ್‌ದೃಷ್ಟಿ ಅಥವಾ ಅಧ್ಯಾತ್ಮದೃಷ್ಟಿಯು ಅವಶ್ಯವಾಗಿರುತ್ತದೆ. ಬಾಹ್ಯದೃಷ್ಟಿಯಲ್ಲಿರುವ ದೋಷವೇನೆಂದರೆ : ಅದು ಪದಾರ್ಥವನ್ನು ವಿಭಜನೆಮಾಡಿ ನೋಡುತ್ತದೆ. ಉದಾಹರಣೆಗೆ ಒಂದು ಕಿತ್ತಲೆಹಣ್ಣಿನ ಜ್ಞಾನವನ್ನು ನಾವು ಮಾಡಿಕೊಳ್ಳಬೇಕಾದರೆ-ಕಣ್ಣು ಅದರ ಆಕಾರ, ಬಣ್ಣವನ್ನು ಮಾತ್ರ ಅರಿಯುತ್ತದೆ. ಕೈ-ಅದರ ಸ್ಪರ್ಶವನ್ನು (ಮೃದುವಾಗಿದೆಯೊ, ಗಟ್ಟಿಯಾಗಿದೆಯೊ ? ಎಂಬುದನ್ನು) ಮಾತ್ರ ತಿಳಿಯುತ್ತದೆ. ನಾಲಗೆಯು ಅದು ಹುಳಿಯೆ, ಸಿಹಿಯೆ ? ಎಂಬುದನ್ನು ಗೊತ್ತು ಪಡಿಸುತ್ತದೆ. ಮೂಗು ಅದರ ವಾಸನೆಯನ್ನು ಕಂಡುಹಿಡಿಯುತ್ತದೆ. ಇವೆಲ್ಲ ಸೇರಿ ನಮಗೆ ಕಿತ್ತಲೆಹಣ್ಣಿನ ಜ್ಞಾನವಾಗುತ್ತದೆ. ಹೀಗೆ ಆತ್ಮನನ್ನು

ಅರಿಯಲು ಸಾಧ್ಯವಾಗುವದಿಲ್ಲ. ಏಕೆಂದರೆ ಅವನಲ್ಲಿ ಶಬ್ದ ಸ್ಪರ್ಶಾದಿಗುಣಗಳಿಲ್ಲ. ಆದ್ದರಿಂದ ಇಂದ್ರಿಯಗಳಿಗೆ ಅವನು ವಿಷಯನಲ್ಲ. ಮತ್ತೆ ಮನಸ್ಸಿಗೂ ಗೋಚರನಲ್ಲವಾದ್ದರಿಂದ ಚಿಂತಿಸಿ ತಿಳಿಯಲೂ ಸಾಧ್ಯವಿಲ್ಲ. ಆದ್ದರಿಂದಲೇ ಶ್ರುತಿಯು 'ಆತನನ್ನು ಜನರು ನೋಡುತ್ತಿಲ್ಲ'-ಎಂದೇ ತಿಳಿಸುತ್ತಿದೆ.

ಹಾಗಾದರೆ ಇಂದ್ರಿಯಗಳಿಗೆ ಗೋಚರನಲ್ಲದ ಆತ್ಮನನ್ನು ಇದ್ದಾನೆಂದು ಹೇಳುವದಾದರೂ ಹೇಗೆ? ಆತ್ಮನಿಲ್ಲವೆಂದೇ ತೀರ್ಮಾನಮಾಡಿದಲ್ಲಿ ತಪ್ಪೇನು? ಎಂದು ಕೇಳಬಹುದಾಗಿದೆ. ಇದಕ್ಕೆ ಉತ್ತರವೇನೆಂದರೆ; ಆತ್ಮನನ್ನು ಯಾವನೂ ಇಲ್ಲವೆನ್ನುವದಾಗುವದಿಲ್ಲ. ಹಾಗೆ ಇಲ್ಲವೆನ್ನುವವನು ತಾನೇ ಇಲ್ಲವಾಗಿ ಬಿಡುವನು. ಮತ್ತು ಆತ್ಮನು ಬೇರೆಯ ರೂಪದಿಂದ ನಮಗೆ ಕಂಡುಬರುತ್ತಲೂ ಇದ್ದಾನೆ. ನಾವು ಮತನಾಡುವಾಗ ಯಾವ ಚೈತನ್ಯಶಕ್ತಿಯ ಬಲದಿಂದ ಮಾತನಾಡುವೆವೋ ಅವನೇ ಆತ್ಮನು. ಹೀಗೆಯೇ ನೋಡುವಾಗ, ಕೇಳುವಾಗ, ಆಲೋಚಿಸುವಾಗ ನಾವು ಆತ್ಮನ ಚೈತನ್ಯದ ಬಲದಿಂದಲೇ ವ್ಯಾಪಾರಮಾಡುತ್ತಿರುವೆವು. ಅವನಿಲ್ಲದೆ ಇದ್ದರೆ-ವಿದ್ಯುಚ್ಛಕ್ತಿಯಿಲ್ಲದ ಯಂತ್ರ ಗಳು ಹೇಗೆ ಕೆಲಸವನ್ನು ಮಾಡಲಾರವೋ-ಹಾಗೆ ನಮ್ಮ ಶರೀರೇಂದ್ರಿಯಗಳು ಏನೂ ಕೆಲಸಮಾಡಲಾರವು. ಆದ್ದರಿಂದ ಆತ್ಮನಿದಾನೆಂದೇ ಸಿದ್ಧವಾಗುತ್ತದೆ. ಹಾಗಾದರೆ ಆತ್ಮನನ್ನು ನೋಡುವವನು, ಕೇಳುವವನು, (ದ್ರಷ್ಟಾ, ಶ್ರೋತಾ) ಎಂದೇ ವ್ಯವಹರಿಸಬಹುದಲ್ಲವೆ ? ಎಂದರೆ ಆಗಬಹುದು. ಆದರೆ ಅದು ಆತನ ಪೂರ್ಣವಾದ ಸ್ವರೂಪವಾಗಿರುವದಿಲ್ಲ. ಅವು ಆತನ ಕರ್ಮನಾಮಗಳೆಂದು ಶ್ರುತಿಯು ತಿಳಿಸುತ್ತಿದೆ. ಏಕೆಂದರೆ ಆತ್ಮನು ನೋಡುವವನು ಎಂದರೆ ಯಾವಾಗಲೂ ನೋಡುತ್ತಲೇ ಇರುವದಿಲ್ಲವಷ್ಟೆ ? ನೋಡುವಾಗ ಮಾತ್ರ ನೋಡುವವನಾಗಿರುತ್ತಾನೆ. ಹೇಗೆ ಅಡಿಗೆಯವನು - ಎಂದರೆ ಅಡಿಗೆ ಮಾಡು ವಾಗ ಮಾತ್ರ ಅವನು ಅಡಿಗೆಯವನು. ಉಳಿದ ಕಾಲದಲ್ಲಿ ಅವನೊಬ್ಬ ಮನುಷ್ಯನಷ್ಟೆ ! ಹಾಗೆಯೇ ಆತ್ಮನು ದ್ರಷ್ಟಾ-ಶ್ರೋತಾ ಎಂದು ಕಂಡುಬಂದರೂ

ಅವೇ ಆತನ ನಿಜಸ್ವರೂಪಗಳಾಗಿರುವದಿಲ್ಲ. ಹಾಗಾದರೆ ನಿಜಸ್ವರೂಪವು ಯಾವದು ? ಆ ಸ್ವರೂಪದಿಂದಲೇ ಅವನನ್ನು ಕಂಡುಕೊಳ್ಳುವದು ಹೇಗೆ ? ಎಂದರೆ ಆತ್ಮನು ಆತ್ಮನೇ-ಎಂಬುದೇ ನಿಜವು. ಆದ್ದರಿಂದ 'ಆತ್ಮೇತ್ಯೇವೋಪಾಸೀತ' (ಆತ್ಮನೆಂದೇ ಅರಿತುಕೊಳ್ಳಬೇಕು) ಎಂದು ಉಪನಿಷತ್ತು ತಿಳಿಸುತ್ತಿದೆ. ಆತ್ಮನೆಂದರೆ ಸರ್ವವ್ಯಾಪಕನು. ಆ ರೂಪದಿಂದ ಅರಿತು ಕೊಂಡಾಗಲೇ ಅವನ ಪೂರ್ಣಪರಿಚಯವು ನಮಗಾಗುವದು. ಹೀಗೆ ನಾವು ಆತ್ಮನನ್ನು ದ್ರಷ್ಟಾ, ಶ್ರೋತಾ-ಎಂದು ಅರಿತಿರುವೆವಾದರೂ ಅದು ಪೂರ್ಣ ಜ್ಞಾನವಲ್ಲ. ಆದ್ದರಿಂದಲೇ 'ನ ಪಶ್ಯನ್ತಿ' (ಜನರು ನೋಡುತ್ತಿಲ್ಲ) ಎಂದು ಉಪನಿಷತ್ತಿನಲ್ಲಿ ತಿಳಿಸಿದೆ. ಭಗವದ್ಗೀತೆಯಲ್ಲಿಯೂ ಇದೇ ವಿಷಯವನ್ನು ಹೀಗೆ ತಿಳಿಸಿದೆ.

ಉತ್ಕ್ರಾಮಂತಂ ಸ್ಥಿತಂ ವಾಪಿ ಭುಂಜಾನಂ ವಾ ಗುಣಾನ್ವಿತಮ್ ।
ವಿಮೂಢಾ ನಾನುಪಶ್ಯಂತಿ ಪಶ್ಯಂತಿ ಜ್ಞಾನಚಕ್ಷುಷಃ ॥

ಆತ್ಮನೇ ಶರೀರವನ್ನು ಬಿಟ್ಟು ಹೊರಡುವಾಗ, ಅಥವಾ ಶರೀರದಲ್ಲೇ ಇದ್ದುಕೊಂಡಿರುವಾಗ ಮತ್ತು ವಿಷಯಭೋಗಗಳನ್ನು ಅನುಭವಿಸುತ್ತಿರುವಾಗ ಹೀಗೆ ಯಾವಾಗ ನೋಡಿದರೂ ತಿಳಿಯಬರುತ್ತಾನಾದರೂ ಶಾಸ್ತ್ರಾಚಾರ್ಯೋಪದೇಶಗಳ ಬಲವಿಲ್ಲದ ಪ್ರಾಕೃತರಾದ ಮೂಢರು ಆತನನ್ನು ಅರಿಯುವದೇ ಇಲ್ಲ, ಆದರೆ ಜ್ಞಾನನೇತ್ರವುಳ್ಳವರು ಯಾವಾಗಲೂ ಅವನನ್ನು ಕಾಣುತ್ತಾರೆ-ಎಂದೇ ಅಲ್ಲಿಯೂ ಹೇಳಿದೆ. ಹೀಗೆ ಸೃಷ್ಟಿಯನ್ನೆಲ್ಲ ಒಳಹೊಕ್ಕಿರುವ, ಪುರಗಳೆಲ್ಲವನ್ನೂ ವ್ಯಾಪಿಸಿಕೊಂಡು ಪುರುಷನಾಗಿರುವ ಪರಮಾತ್ಮನನ್ನು ಜೀವಭಾವದಿಂದ ಕಂಡುಕೊಂಡಿರುವದೇ ಸಂಸಾರವು. ಅದೇ ನಮ್ಮ ಶೋಕಮೋಹಾದಿಗಳಿಗೆ ಕಾರಣವಾಗಿರುವದು. ಅದಕ್ಕೆ ಬದಲಾಗಿ ಶ್ರುತಿಯು ತಿಳಿಸುವಂತೆ ಆತ್ಮನೆಂದೇ ಕಂಡುಕೊಂಡರೆ ನಾವು ವೀತಶೋಕರಾಗುವೆವು.

## 5. ಧನ್ಯೋ ಗೃಹಸ್ಥಾಶ್ರಮಃ

ಈವರೆಗೆ ನಾವು ಪುರ, ಪುರುಷ-ಇವರ ತತ್ತ್ವವನ್ನು ವಿಚಾರಮಾಡಿದಂತಾಗಿದೆ. ಈ ಪುರುಷನು ಸೃಷ್ಟಿಮಾಡಿರುವ ಪ್ರಪಂಚದಲ್ಲಿ ನಮ್ಮ ಸ್ಥಾನವೇನು ? ಪುರುಷನ ಪೂರ್ಣವಾದ ತತ್ತ್ವದ ಅರಿವು ನಮಗೆ ದೊರಕುವವರೆಗೆ ನಾವು ಹೇಗಿರಬೇಕು ? ನಾವಾದರೂ ಪರಮಾರ್ಥದೃಷ್ಟಿಯಿಂದ ಪುರುಷನಿಗಿಂತ ಬೇರೆಯೇನೂ ಅಲ್ಲವಷ್ಟೆ ? ಏಕೆಂದರೆ ಸರ್ವವ್ಯಾಪಕನಾದ ಪುರುಷನ ಮಹಿಮೆಯಲ್ಲಿಯೇ ನಾವೂ ಸೇರಿಹೋಗಿದ್ದೇವಲ್ಲವೆ ? ಆದ್ದರಿಂದ ನಾವು ಆ ಪರಮಪುರುಷನ ಆರಾಧನೆಯನ್ನು ಹೇಗೆ, ಎಲ್ಲಿ, ಯಾವಾಗ ಮಾಡಬೇಕು ? ಮುಂತಾದ ವಿಚಾರಗಳನ್ನು ಈಗ ಮಾಡೋಣ.

ಮನುಷ್ಯನಿಗೆ ಹುಟ್ಟುವಾಗಲೇ ಎಲ್ಲ ತಿಳಿವಳಿಕೆಯೂ ನಡೆನುಡಿಗಳೂ ಸ್ವಭಾವದಿಂದಲೇ ಇದ್ದುಕೊಂಡಿರುವದಿಲ್ಲ. ಒಂದು ವೇಳೆ ಅವು ಬೀಜರೂಪವಾಗಿದ್ದುಕೊಂಡಿದ್ದರೂ ಅವುಗಳ ಆವಿರ್ಭಾವಕ್ಕೆ ತಕ್ಕ ಸನ್ನಿವೇಶವೂ ಬೇಕೇ ಬೇಕು. ಸೃಷ್ಟಿಕರ್ತನು ಈ ವಿಷಯವನ್ನು ಮೊದಲೇ ಅರಿತವನಾಗಿ ಅದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಯೇ ಇದ್ದಾನೆ. ಕೆಲವುವೇಳೆ ತಾನೇ 'ಅವತಾರ' (ವಿಶೇಷ ಸಂದರ್ಭಗಳಲ್ಲಿ ಸ್ವೀಕರಿಸುವ ದಿವ್ಯರೂಪ) ವನ್ನು ಮಾಡಿ ನಡೆದು ತೋರಿಸಿಯೂ ಇರುತ್ತಾನೆ. ಶಾಸ್ತ್ರಗಳಂತೂ ನಮಗೆ ಪ್ರದೀಪಗಳಂತೆ ಬೇಕಾದ ವಿಷಯಗಳನ್ನು ತಿಳಿಸುತ್ತಲೇ ಇವೆ. ಅವುಗಳನ್ನು ನಾವೇ ಅರ್ಥಮಾಡಿಕೊಳ್ಳಲಾಗದಿದ್ದರೆ ತಿಳಿದು ಹೇಳುವ ಗುರುಗಳೂ ಭೋದಕರೂ ಶಿಷ್ಟಾಚಾರಸಂಪನ್ನರೂ ಇದ್ದೇ ಇರುತ್ತಾರೆ. ಆದ್ದರಿಂದ ಸೌಕರ್ಯಗಳಿಗೇನೂ ಕಡಿಮೆಯಿಲ್ಲ. ಪ್ರಕೃತ-ಒಬ್ಬ ವ್ಯಕ್ತಿಯು ತನ್ನ ಜೀವಮಾನದಲ್ಲಿ ಕಳೆಯಬೇಕಾದ ಆಯುಷ್ಯವನ್ನು ನಾಲ್ಕು ಭಾಗಮಾಡಿ ಆಯಾ ಕಾಲದಲ್ಲಿ ಹೇಗೆ ನಡೆಯಬೇಕೆಂಬುದನ್ನು ಭಗವಂತನೇ (ಸೃಷ್ಟಿಕರ್ತನೇ) ಶಾಸ್ತ್ರಗಳಮೂಲಕ ಅಪ್ಪಣೆಕೊಡಿಸಿರುತ್ತಾನೆ. ಇದನ್ನೇ ''ವರ್ಣಾಶ್ರಮಧರ್ಮ''ವೆಂದು ಬಲ್ಲವರು ಕರೆಯುವರು. ಸನಾತನಧರ್ಮ

ವೆಂಬ ದೊಡ್ಡವೃಕ್ಷದ ಒಂದು ಮುಖ್ಯ ಶಾಖೆಯೇ ವರ್ಣಾಶ್ರಮಧರ್ಮವು. ಇದು ಮಾನವನ ಶ್ರೇಯಸ್ಸಿಗಾಗಿಯೇ ವಿಧಿಸಲ್ಪಟ್ಟಿದೆ. ಇದಕ್ಕೆ ಲೋಪ ವುಂಟಾದಾಗ ಭಗವಂತನೇ ಅವತರಿಸಿ ಇದನ್ನು ಉದ್ಧಾರಮಾಡುವನು. 'ಧರ್ಮಸ್ಯ ಪ್ರಭುರಚ್ಯುತಃ' ಎಂದೇ ಪುರಾಣಗಳಲ್ಲಿ ತಿಳಿಸಿದೆ. ಪ್ರಕೃತ ಸಂದರ್ಭದಲ್ಲಿ 'ಗೃಹಪ್ರವೇಶ'ವೆಂಬುದು ಈ ಗ್ರಂಥದ ವಿಷಯವಾಗಿರು ವದರಿಂದ ಗೃಹವನ್ನು ನಿರ್ಮಿಸಿಕೊಂಡು ಅದನ್ನು ವ್ಯಾವಹಾರಿಕವಾಗಿ ತನ್ನದೆಂದು ಭಾವಿಸಿಕೊಂಡಿರುವ ಅಧ್ಯಾತ್ಮಸಾಧಕನು ಹೇಗೆ ಆದರ್ಶವಾಗಿ ನಡೆಯಬೇಕೆಂಬುದನ್ನು ಭಗವಂತನು ಆದರ್ಶಗೃಹಸ್ಥನಾಗಿಯೇ ಅವತರಿಸಿ ತೋರಿಸಿಕೊಟ್ಟಿರುವ ಉದಾಹರಣೆಯಿದೆ. ಆ ಮೂಲಕ ಗಾರ್ಹಸ್ಥ್ಯ ಜೀವನವನ್ನು ವಿಚಾರಿಸೋಣ.

ತ್ರೇತಾಯುಗದಲ್ಲಿ ದುಷ್ಟರಾದ ರಾವಣಾದಿರಾಕ್ಷಸರನ್ನು ಸಂಹರಿಸಿ ಲೋಕಕಲ್ಯಾಣವನ್ನು ಸಾಧಿಸುವದಕ್ಕಾಗಿ ಭಗವಂತನೇ ಶ್ರೀರಾಮನಾಗಿ ಅವತರಿ ಸಿದನು. ಆತನು ಗೃಹಸ್ಥಧರ್ಮವನ್ನು ಸ್ವೀಕರಿಸಿ ಧರ್ಮಪತ್ನಿಯಾದ ಸೀತೆ ಯೊಡನೆ ಕೂಡಿ ಎಲ್ಲಾ ಗೃಹಸ್ಥರಿಗೂ ಆದರ್ಶವಾಗಿ ಬಾಳಿ ಮರ್ಯಾದಾ ಪುರುಷೋತ್ತಮನೆನಿಸಿದನು. ಆತನಿಗಿಂತಲೂ ಆದರ್ಶರಾದವರನ್ನು ನಾವು ಕಾಣಲು ಸಾಧ್ಯವಿಲ್ಲ. ಆದರೂ ತಾನೂ ಎಲ್ಲರಂತೆಯೇ ಮನುಷ್ಯನು, ತಾನೊಬ್ಬ ರಾಜಕುಮಾರನೆಂದೇ ಅವನು ಹೇಳಿಕೊಂಡಿರುತ್ತಾನೆ. ಇದು ನಮಗೆಲ್ಲ ಮೇಲುಪಂಕ್ತಿಯಾಗಿದೆ. ಅಧ್ಯಾತ್ಮದೃಷ್ಟಿಯಿಂದ ಶ್ರೀರಾಮನು ಸಾಕ್ಷಾದ್ ವಿಷ್ಣುವೇ ಆಗಿದ್ದಾನೆ. ಆದರೆ ವ್ಯವಹಾರದಲ್ಲಿ ತಾನು ಸಂಸಾರಿ ಯಂತೆಯೇ ನಡೆದು ತೋರಿಸಿಕೊಟ್ಟಿದ್ದಾನೆ. ಸಂಸಾರಿಯಾದ ಪುರುಷನು ಧರ್ಮವನ್ನು ಸ್ವಲ್ಪವೂ ಲೋಪವಿಲ್ಲದಂತೆ ಅನುಷ್ಠಾನಮಾಡಿ ಅದರ ಬಲದಿಂದ ತಾನು ಭಗವಂತನಾಗಿ ಪೂಜ್ಯನಾಗಬಹುದು, ಮುಕ್ತನಾಗಬಹುದು-ಎಂಬುದನ್ನು ಶ್ರೀರಾಮನ ಉದಾಹರಣೆಯಿಂದ ನಾವು ತಿಳಿಯಬಹುದಾಗಿದೆ ; ಮತ್ತು ಪರಮಾರ್ಥದೃಷ್ಟಿಯಿಂದ ಎಂದೆಂದೂ ಭಗವಂತನಿಗಿಂತ ಅನನ್ಯರೇ

ಆಗಿರುವ ನಾವು ಈಗ ಸಂಸಾರಿಗಳಾಗಿ ಬಾಳುತ್ತಿದ್ದರೂ ಇದು ಆಗಂತುಕ ; ನಮ್ಮ ಸ್ವರೂಪವು ನಿತ್ಯಶುದ್ಧಬುದ್ಧಮುಕ್ತವಾದ ಬ್ರಹ್ಮವೇ-ಎಂಬ ಅಧ್ಯಾತ್ಮಶಾಸ್ತ್ರೋಪದೇಶವೂ ಶ್ರೀರಾಮನ ದೃಷ್ಟಾಂತದಿಂದ ನಮಗೆ ಮನದಟ್ಟಾಗಲಿದೆ.

ಅಧ್ಯಾತ್ಮರಾಮಾಯಣದಲ್ಲಿ ಬರುವ ಒಂದು ಸಂದರ್ಭವನ್ನು ಇಲ್ಲಿ ನೆನಪುಮಾಡಿಕೊಳ್ಳಬಹುದು. ಸೀತಾಕಲ್ಯಾಣದ ಅನಂತರ ಶ್ರೀರಾಮನು ಪತ್ನೀಸಮೇತನಾಗಿ ಅಯೋಧ್ಯೆಯಲ್ಲಿರುವ ಕಾಲಕ್ಕೆ ಒಂದು ದಿನ ನಾರದಮಹಾಮುನಿಗಳು ಶ್ರೀರಾಮನನ್ನು ಭೇಟಿಮಾಡಲು ಬಂದರು. ನಾರದರನ್ನು ಕಂಡು ರಾಮನು ನಮಸ್ಕರಿಸಿ ಸತ್ಕಾರಮಾಡಿ ಅನಂತರ ಹೀಗೆಂದನು:-

ಸಂಸಾರಿಣಾಂ ಮುನಿಶ್ರೇಷ್ಠ ದುರ್ಲಭಂ ತವ ದರ್ಶನಮ್ ।<br>
ಅವಾಪ್ತಂ ಮೇ ಪೂರ್ವಜನ್ಮಕೃತಪುಣ್ಯಮಹೋದಯೈಃ ।<br>
ಸಂಸಾರಿಣಾಪಿ ಹಿ ಮುನೇ ಲಭ್ಯತೇ ಸತ್ಸಮಾಗಮಃ ॥

"ಎಲೈ ಮುನಿವರ್ಯರೆ, ಸಂಸಾರಿಗಳಿಗೆ ನಿಮ್ಮ ದರ್ಶನವು ದುರ್ಲಭವು. ನನಗಾದರೊ, ಹಿಂದಿನ ಜನ್ಮದ ಪುಣ್ಯವಿಶೇಷಫಲಗಳಿಂದ ತಮ್ಮ ಸಮಾಗಮವು ದೊರಕಿರುತ್ತದೆ. ಅಂತೂ ಸಂಸಾರಿಗಳಿಗೂ ಸಾಧುಸಂಗವು ದೊರಕಲಿದೆ" - ಎಂದು ಹೇಳಿದಾಗ ನಾರದರು-

ಕಿಂ ಮೋಹಯಸಿ ಮಾಂ ರಾಮ ವಾಕ್ಯೈರ್ಲೋಕಾನುಸಾರಿಭಿಃ ।<br>
ಸಂಸಾರ್ಯಹಮಿತಿ ಪ್ರೋಕ್ತಂ ಸತ್ಯಮೇತತ್ತ್ವಯಾ ವಿಭೋ ।<br>
ಜಗತಾಮಾದಿಭೂತಾ ಯಾ ಸಾ ಮಾಯಾ ಗೃಹಿಣೀ ತವ ॥

'ಎಲೈ ರಾಮನೆ, ನನ್ನನ್ನೇಕೆ ಮೋಹಗೊಳಿಸುವೆ ? ನೀನು ಸಂಸಾರಿಯೆಂದು ಹೇಳಿಕೊಂಡಿರುವದು ಒಂದು ರೀತಿಯಲ್ಲಿ ನಿಜ. ಏಕೆಂದರೆ ಜಗತ್ತಿಗೇ ಆದಿಕಾರಣಳೂ ತಾಯಿಯೂ ಆದ ಪ್ರಕೃತಿಯೇ ನಿನ್ನ ಪತ್ನಿಯು"-ಎಂದು ಉತ್ತರಕೊಟ್ಟಿರುತ್ತಾರೆ.

ಇದರಿಂದ ತಿಳಿದುಬರುವದೇನೆಂದರೆ : ಶ್ರೀರಾಮನು ಸಾಕ್ಷಾದ್ ವಿಷ್ಣುವು. ಅವನ ಶಕ್ತಿರೂಪಳಾದ ಪ್ರಕೃತಿಯೇ ಮಹಾಲಕ್ಷ್ಮಿಯು. ಈ ಲಕ್ಷ್ಮೀ ನಾರಾಯಣರು ಜಗತ್ತಿನ ಕಲ್ಯಾಣಕ್ಕಾಗಿ ಧರ್ಮವನ್ನು-ಅದರಲ್ಲಿಯೂ ಗಾರ್ಹಸ್ಥ್ಯಧರ್ಮವನ್ನು ಆಚರಿಸಿ ತೋರಿಸಿರುವದನ್ನು ವಿಚಾರಮಾಡಿದಲ್ಲಿ ನಮಗೆ ಬೇಕಾದ ಎಲ್ಲಾ ತಿಳಿವಳಿಕೆಗಳು ದೊರೆಯುತ್ತವೆ. ಬಹಳ ಮಟ್ಟಿಗೆ ಶ್ರೀರಾಮನ ಚರಿತ್ರೆಯಲ್ಲಿ ಆತನನ್ನು ಅನುಸರಿಸಿದ, ಹಾಗೂ ಆತನನ್ನು ಭೇಟಿಮಾಡಿದ, ಅವನೊಡನೆ ವ್ಯವಹಾರಮಾಡಿದ ವ್ಯಕ್ತಿಗಳೆಲ್ಲರೂ ಗೃಹಸ್ಥರೇ ಆಗಿದ್ದಾರೆ. ಶ್ರೀರಾಮನ ಪರಿವಾರವೂ ಧರ್ಮಪರಿವಾರವೇ. ಏಕೆಂದರೆ ಅವನೊಡನೆ ಇದ್ದ ವ್ಯಕ್ತಿಗಳೆಲ್ಲ ಧರ್ಮನಿಷ್ಠರು. ಅಧರ್ಮಿಗಳಿಗೆ ಅಲ್ಲಿ ಜಾಗವೇ ಇಲ್ಲ. ಇದೇ ಗೃಹಸ್ಥನಿಗೆ ಬೇಕಾದ ಆದರ್ಶವು. ಆದ್ದರಿಂದ ಗೃಹಸ್ಥನಾಗಿ ಶ್ರೇಯಸ್ಸಾಧನೆ ಮಾಡಲಿಚ್ಛಿಸುವವನು ಶ್ರೀರಾಮನನ್ನು ಅನುಸರಿಸಬೇಕು. ಒಂದು ವೇಳೆ ಅವನನ್ನು ಪೂರ್ಣವಾಗಿ ಅನುಕರಿಸಲಾಗದಿದ್ದರೂ ಅವನನ್ನು ಅನುಕರಿಸಿದವರನ್ನು ನಾವು ಹಿಂಬಾಲಿಸಿದರೂ ಸಾಕು ; ಕೃತಕೃತ್ಯರಾಗುವೆವು. ಹೀಗಿದೆ, ಗೃಹಸ್ಥಧರ್ಮದ ಹಿರಿಮೆ !

ಸನಾತನಧರ್ಮದಲ್ಲಿ ಗೃಹಸ್ಥನನ್ನು ಒಂದು ದೊಡ್ಡ ಮರಕ್ಕೆ ಹೋಲಿಸಲಾಗಿದೆ. ಒಂದು ಅರಳಿಯ ಮರವನ್ನು ನೆನಪು ಮಾಡಿಕೊಳ್ಳಿರಿ. ಈ ಮರವು ಎತ್ತರವಾಗಿಯೂ ವಿಶಾಲವಾಗಿಯೂ ಬೆಳೆದು ಶಾಖೋಪಶಾಖೆ ಗಳಾಗಿ ಎಲ್ಲಾ ದಿಕ್ಕುಗಳಿಗೂ ಹರಡಿಕೊಂಡಿದೆ. ಇದರ ನೆರಳು ಅನೇಕ ಪ್ರಾಣಿಗಳಿಗೂ ಮನುಷ್ಯರಿಗೂ ತಂಪನ್ನೀಯುವದು. ಇದರ ಪೊಟರೆಗಳಲ್ಲಿ ಹಾವು ಹಲ್ಲಿಗಳು ವಾಸವಾಗಿರುವವು. ಕೊಂಬೆರೆಂಬೆಗಳಮೇಲೆ ಹಕ್ಕಿಗಳು ಗೂಡುಕಟ್ಟಿಕೊಂಡು ಸಂಸಾರಮಾಡಿಕೊಂಡಿರುವವು. ಇದರ ಹಣ್ಣುಗಳು ಹಕ್ಕಿಗಳಿಗೆ ಆಹಾರವಾಗಿರುವದು. ಸೊಪ್ಪನ್ನು ಕೆಲವು ಪ್ರಾಣಿಗಳು ತಿನ್ನುವವು. ಈ ಮರದ ಬುಡದಲ್ಲಿ ನಾಗರಕಲ್ಲುಗಳನ್ನು ನೆಟ್ಟು ಜನರು ಪೂಜಿಸುವರು.

ರೋಗಗ್ರಸ್ತರೂ ಪುತ್ರೋತ್ಪತ್ತಿಯನ್ನು ಬಯಸುವವರೂ ಇದರ ಪ್ರದಕ್ಷಿಣ ಸೇವಾದಿಗಳನ್ನು ಮಾಡುವರು. ಇದಕ್ಕೆ ಉಪನಯನ, ವಿವಾಹಸಂಸ್ಕಾರಗಳು ಕೂಡ ನಡೆಯುವವು. ಇಂಥ ಮರವು ವಯಸ್ಸಾಗಿ ಬಿದ್ದರೂ ಸೌದೆಯಾಗಿ ಉಪಯೋಗವಾಗುವದು. ಹೀಗೆ ಈ ವೃಕ್ಷವು ಎಲ್ಲಾ ಬಗೆಯಿಂದಲೂ ತನ್ನ ಹುಟ್ಟನ್ನು ಸಾರ್ಥಕಗೊಳಿಸಿಕೊಂಡು ಸ್ವಾರ್ಥತ್ಯಾಗಮಾಡಿ ಪರೋಪಕಾರಕ್ಕಾಗಿಯೇ ಇದ್ದುಕೊಂಡಿರುವದು. ಹಾಗೆಯೇ ಗೃಹಸ್ಥಜೀವನದ ಗುರಿಯೂ ಇದ್ದುಕೊಂಡಿರುವದು. ಗೃಹಸ್ಥನಾದವನು ನ್ಯಾಯದಿಂದ ಹಣವನ್ನು ಸಂಪಾದಿಸಬೇಕು. ಸಂಪಾದಿಸಿದ್ದನ್ನು ಕೂಡಿಡದೆ ಹಂಚಬೇಕು. ತನ್ನ ಆಶ್ರಿತರಾದ ಕುಟುಂಬದ ಎಲ್ಲಾ ಸದಸ್ಯರನ್ನೂ ಕಾಪಾಡಬೇಕು. ಅವರೆಲ್ಲರ ಅಪೇಕ್ಷೆಗಳನ್ನೂ ಸಾಧ್ಯವಾದಷ್ಟು ಪರಿಪೂರ್ತಿಗೊಳಿಸಬೇಕು. ನಿತ್ಯಕರ್ಮಗಳನ್ನು ತಪ್ಪದೆ ಅನುಷ್ಠಾನಮಾಡುವದರ ಜೊತೆಗೆ ದೇವಪಿತೃಕಾರ್ಯಗಳನ್ನೂ ಪ್ರಮಾದವಿಲ್ಲದೆ ನೆರವೇರಿಸಬೇಕು. ಮನೆಗೆ ಬಂದ ಅತಿಥಿಗಳಿಗೆ ಸತ್ಕಾರಮಾಡಬೇಕು. ಅದರಲ್ಲಿಯೂ ಯತಿಗಳೂ ಬ್ರಹ್ಮಚಾರಿಗಳೂ ಗೃಹಸ್ಥನು ಕೊಡುವ ಭಿಕ್ಷೆಯನ್ನೇ ಅವಲಂಬಿಸಿಕೊಂಡಿರುವರು. ಅಂಥವರನ್ನು ಮೊದಲು ಗೌರವಿಸಬೇಕು. ತಾನು ವಾಸಿಸುವ ಗೃಹ, ಬೀದಿ, ಊರು, ರಾಷ್ಟ್ರಗಳಲ್ಲಿ ಪ್ರೇಮವನ್ನಿಟ್ಟು ಎಲ್ಲಾ ಜನರಲ್ಲಿಯೂ ವಿಶ್ವಾಸದಿಂದ ನಡೆದುಕೊಳ್ಳಬೇಕು. ಸುಖದುಃಖಗಳಿಗೆ ಹಿಗ್ಗಿ ತಗ್ಗಿ ಮಾಡಬಾರದು. ದೀಪವು ತನ್ನನ್ನು ತಾನು ಸುಟ್ಟುಕೊಂಡು ಎಲ್ಲರಿಗೂ ಬೆಳಕನ್ನು ಕೊಡುವಂತೆ ಗೃಹಸ್ಥನು ತನ್ನ ಆತ್ಮಾರ್ಪಣೆಮಾಡಿಕೊಂಡು ಪರಾರ್ಥವನ್ನೇ ಸಾಧಿಸಬೇಕು. ತಾನು ಎಂದಿಗೂ ಕರ್ತವ್ಯಭ್ರಷ್ಟನಾಗಬಾರದು. ಸತ್ಯದಿಂದ ಜಾರಬಾರದು. ಇಂದ್ರಿಯನಿಗ್ರಹ ಸಂಪನ್ನನಾಗಿರಬೇಕು. ಹೀಗೆ ನೋಡಿದರೆ ಗೃಹಸ್ಥನು ಯಾವ ಸಂನ್ಯಾಸಿಗಿಂತಲೂ ಕಡಿಮೆಯಲ್ಲ. ಎಷ್ಟೋವೇಳೆಗಳಲ್ಲಿ ಕಾಮಕ್ರೋಧಗಳನ್ನು ಗೃಹಸ್ಥನು ಜಯಿಸುವಷ್ಟು ಸುಲಭವಾಗಿ ಇತರಾಶ್ರಮದವರು ಜಯಿಸಲಾಗುವದಿಲ್ಲ. ಈ ರೀತಿಯಾಗಿ ಗೃಹಸ್ಥಜೀವನವು ಒಂದು ದೊಡ್ಡ ತಪಸ್ಸಾಗಿರುವದು.

## 6. ಕುರ್ವನ್ನೇವೇಹ ಕರ್ಮಾಣಿ

ಈಗ ಶಾಸ್ತ್ರವು ಗೃಹಸ್ಥನನ್ನು ಕುರಿತು ಏನನ್ನು ವಿಧಿಸುತ್ತದೆ ? ಎಂಬುದನ್ನು ನೋಡೋಣ. ಮನುಷ್ಯನು ನೂರು ವರ್ಷಗಳವರೆಗೆ ಬದುಕಿರಲು ಇಚ್ಛಿಸಬೇಕು. ಆ ನೂರು ವರ್ಷಗಳೂ ಕರ್ಮಗಳನ್ನು ಮಾಡಿಕೊಂಡೇ ಇರಬೇಕು-ಎಂದು ಶ್ರುತಿಯು ತಿಳಿಸುತ್ತಿದೆ. ಆದರೂ ಗೃಹಸ್ಥನು ಕಾಮಗಳನ್ನು ಗೆದ್ದಂತೆಲ್ಲ ತಪಸ್ವಿಯೂ ಯೋಗಿಯೂ ಆಗುವನು. ಆಗ ಅವನಿಗೆ ಸಂನ್ಯಾಸವನ್ನೂ ಜ್ಞಾನವನ್ನೂ ಪಡೆಯಲು ಸಾಧ್ಯವಿದೆ. ಆದರೆ ಗೃಹಸ್ಥಧರ್ಮಗಳನ್ನು ಪೂರೈಸದೆ, ಅದರ ಜವಾಬ್ದಾರಿಯಿಂದ ಬಿಡಿಸಿಕೊಳ್ಳದೆ ಸಂನ್ಯಾಸಮಾಡುವದನ್ನು ಶಾಸ್ತ್ರವು ಒಪ್ಪುವದಿಲ್ಲ. ಒಂದು ವೇಳೆ ನೂರು ವರ್ಷಕಾಲ ಕರ್ಮಾನುಷ್ಠಾನಮಾಡಿಕೊಂಡಿದ್ದರೂ ಕಾಮವನ್ನೇ ಬಿಡಲಾಗದಿದ್ದರೆ ಅಂಥವನಿಗೆ ಇಡಿಯ ಜೀವನವೆಲ್ಲ ಕರ್ಮವನ್ನೇ ಮಾಡೆಂದು ಶ್ರುತಿಯು ತಿಳಿಸುತ್ತದೆ, ಅಷ್ಟೆ. ಇದು ಶ್ರುತಿಯ ತಪ್ಪಲ್ಲ. ಕಾಮಗಳನ್ನು ಗೆಲ್ಲುವ ಉಪಾಯಗಳಾಗುವಂತೆ ಕರ್ಮಗಳನ್ನು ಮಾಡದೆ ಇರುವ ನಮ್ಮ ತಪ್ಪೇ ಆಗಿದೆ. ಆದ್ದರಿಂದ ಬರಿಯ ಕರ್ಮವನ್ನು ಎಷ್ಟುಕಾಲದವರೆಗೆ ಮಾಡಿದರೂ ಪ್ರಯೋಜನವಿಲ್ಲ, ಅದನ್ನು ಯೋಗ-ಎಂದರೆ ಜ್ಞಾನಕ್ಕೆ ಉಪಾಯವಾಗಿ ಮಾಡಬೇಕು. ಇದೇ ಗೃಹಸ್ಥಧರ್ಮದ ಮುಖ್ಯ ಲಕ್ಷಣವು.

ಈಗ ಗೃಹಸ್ಥನಿಗಾಗಿಯೇ ಹೇಳಿರುವ ಕರ್ಮಗಳಾವುವು ? ಎಂಬಿದನ್ನು ವಿಚಾರಿಸೋಣ. ಶ್ರೌತ, ಸ್ಮಾರ್ತಗಳೆಂದು ವಿಭಾಗಿಸಲ್ಪಟ್ಟಿರುವ ಎಲ್ಲಾ ಕರ್ಮಗಳನ್ನೂ ಬಹಳಮಟ್ಟಿಗೆ ಗೃಹಸ್ಥನಿಗೇ ಹೇಳಲಾಗಿದೆ. ಜೊತೆಗೆ ಶಿಷ್ಟಾಚಾರ, ವೈದಿಕಾಚಾರ, ಕುಲಾಚಾರಗಳನ್ನೂ ಆತನು ಅನುಸರಿಸಬೇಕಾಗುತ್ತದೆ. ಇದು ನಿಜವಾಗಿಯೂ ಬಹಳ ದೊಡ್ಡ ಹೊರೆಯೇ ಸರಿ. ಆದರೂ ಕಾಮಕ್ರೋಧಗಳನ್ನು ಜಯಿಸಲು ಹಾಗೂ ಆತ್ಮಸಂಸ್ಕಾರಮಾಡಿಕೊಳ್ಳಲು ಇವೆಲ್ಲ ಬೇಕಾಗಿರುತ್ತವೆ. ಈಗಿನ ಕಾಲಕ್ಕೆ ನಮ್ಮ ಶರೀರದ ರಕ್ಷಣೆ, ಅಲಂಕಾರ, ಆಹಾರಾದಿ

ಅವಶ್ಯಕತೆಗಳಿಗೆ ಬೇಕಾದ ಪದಾರ್ಥಗಳನ್ನು ನಾವು ಬಿಟ್ಟಿರಲು ಸಾಧ್ಯವಿಲ್ಲ, ಆದ್ದರಿಂದ ಎಲ್ಲಿಗೆ ಹೋದರೂ ಅವುಗಳನ್ನು ಜೊತೆಯಲ್ಲಿಯೇ ತೆಗೆದುಕೊಂಡೇ ಹೋಗುತ್ತೇವಲ್ಲವೆ ? ಭಾರವು ಹೆಚ್ಚಾದರೂ ಯತ್ನವಿಲ್ಲದೆ ಒಯ್ಯುತ್ತೇವೆ. ಹಾಗೆಯೇ ಕರ್ಮಗಳು ಭಾರವಾಗಿ ಕಂಡರೂ ಅವು ಪ್ರಯೋಜನಕಾರಿಗಳಾಗಿರುವದರಿಂದ ಗೃಹಸ್ಥನು ಅವುಗಳನ್ನು ಮಾಡಲೇಬೇಕಾಗಿದೆ. ಆದ್ದರಿಂದ ಗೃಹಸ್ಥನು ತನ್ನ ಕರ್ತವ್ಯಗಳನ್ನು ಸರಿಯಾಗಿ ಗೊತ್ತುಮಾಡಿಕೊಂಡು ಹಾಗೂ ಅರ್ಥಮಾಡಿಕೊಂಡು ಮತ್ತು ಅವುಗಳಿಗೆ ಬೇಕಾದ ಸಿದ್ಧತೆಗಳನ್ನೂ ಮಾಡಿಕೊಂಡು ಧರ್ಮಮಾರ್ಗದಿಂದ ನಡೆಯುವ ಸಂಕಲ್ಪವುಳ್ಳವನಾಗಬೇಕು. ವಿಧಿಸಲ್ಪಟ್ಟ ಕರ್ಮಗಳನ್ನೂ ಮಾಡಬೇಕು.

## 7. ಶ್ರಿಯಾ ವಾ ಏತದ್ರೂಪಮ್ । ಯತ್ಪತ್ನಯಃ

ಗೃಹಸ್ಥಧರ್ಮವು ಹೆಂಗಸಿನ ಜೊತೆಗೂಡಿಯೇ ಅನುಷ್ಠಿಸಬೇಕಾಗಿರುವದೊಂದು ವಿಶೇಷವಾಗಿದೆ. ಆದ್ದರಿಂದಲೇ ಜೊತೆಗಾರ್ತಿಯನ್ನು 'ಸಹಧರ್ಮಚಾರಿಣೀ' 'ಧರ್ಮಪತ್ನೀ' ಮುಂತಾದ ಗೌರವಯುತವಾದ ಪದಗಳಿಂದ ಕರೆಯಲಾಗಿದೆ. ಬ್ರಹ್ಮಚರ್ಯಾಶ್ರಮದಲ್ಲಿ ವಿದ್ಯಾಭ್ಯಾಸವನ್ನು ಕೈಗೊಂಡು ಅದು ಪೂರೈಸಿದ ಅನಂತರ ಗುರುದಕ್ಷಿಣೆಯನ್ನು ಕೊಟ್ಟು ಗುರುಕುಲದಿಂದ ಹಿಂತಿರುಗಬೇಕು. ಇದಕ್ಕೆ ಸಮಾವರ್ತನವೆಂದು ಹೆಸರು. ಅನಂತರ ಅನುರೂಪಳಾದ ಕುಲಶೀಲವಯೋವಿದ್ಯಾದಿಗಳಿಂದ ಸಂಪನ್ನಳಾದ ಕನ್ಯೆಯನ್ನು ಪ್ರತಿಗ್ರಹ ಮಾಡಿ ಗೃಹಸ್ಥಧರ್ಮವನ್ನು ಆಕೆಯೊಡಗೂಡಿ ಆಚರಿಸಬೇಕು. ಆಕೆಯೂ ಸಹ ತನ್ನ ಕನ್ಯಾತ್ವದಿಂದ ಮೇಲೇರಿ ಪಾಣಿಗ್ರಹಣದ ಅನಂತರ ಗೃಹಿಣಿಯಾಗುವಳು. ಧರ್ಮಾರ್ಥಕಾಮಗಳನ್ನು ಇವರಿಬ್ಬರೂ ಇನ್ನುಮುಂದೆ ಒಟ್ಟಾಗಿಯೇ ಸೇವಿಸಬೇಕಾಗುವದು. ಹಾಗೆಂತ ಪ್ರತಿಜ್ಞೆಯನ್ನು ಗೃಹಸ್ಥನು ಅಗ್ನಿಸಾಕ್ಷಿಯಾಗಿ ಮಾಡುವನು. ಅಲ್ಲಿಂದ ಮುಂದೆ ಎಲ್ಲಾ ಕರ್ಮಗಳನ್ನೂ ಅಗ್ನಿಯ ಮೂಲಕವೇ ಗೃಹಸ್ಥನು ನೆರವೇರಿಸಬೇಕಾಗಿರುವದರಿಂದ ತನ್ನ ಮನೆಯಲ್ಲಿ ವಿವಾಹದಲ್ಲಿ

ಸ್ಥಾಪಿಸಿದ ಅಗ್ನಿಯನ್ನೇ ಶಾಶ್ವತವಾಗಿಟ್ಟುಕೊಂಡು ಎರಡುಹೊತ್ತೂ ಪ್ರತಿದಿನವೂ ಅಗ್ನಿಹೋತ್ರ, ಔಪಾಸನಾದಿಗಳನ್ನು ನೆರವೇರಿಸಬೇಕೆಂದು ಶಾಸ್ತ್ರದಲ್ಲಿ ತಿಳಿಸಿದೆ. ಅಗ್ನಿಯನ್ನು 'ಗೃಹಪತಿ' ಎಂದೇ ವೇದದಲ್ಲಿ ಗೌರವಿಸಿದೆ. ಈ ಅಗ್ನಿಯು ಗಂಡಹೆಂಡತಿಯರು ಒಟ್ಟಿಗೆ ಜೀವಂತವಾಗಿರುವವರೆಗೂ ಇದ್ದುಕೊಂಡಿರುವದು. ಹೀಗೆ ಅಗ್ನಿಪರಿಚರ್ಯೆಯನ್ನು ಮಾಡುವ ಗೃಹಸ್ಥನನ್ನು "ಧಾರಯಾಗ್ನಿ"ಯೆಂದು ವೇದದಲ್ಲಿ ತಿಳಿಸಿದೆ. ಆದರೆ ಈ ಅಗ್ನಿಯನ್ನು ಸದಾಕಾಲವೂ ಕಾಪಾಡುವ ಭಾರವು ಪತ್ನಿಯದು. ಹಾಗೂ ಆಕೆಯ ಯಜಮಾನನ ಗೈರುಹಾಜರಿಯಲ್ಲಿ ಅಗ್ನಿಪೂಜೆಯನ್ನು ನೆರವೇರಿಸಲೂ ಬೇಕಾಗುವದು. ಯಜಮಾನನು ದೀರ್ಘಕಾಲ ಹೊರಗೆ ಹೋಗುವದಿದ್ದರೆ ಜೊತೆಯಲ್ಲೇ ಅಗ್ನಿಯನ್ನು ಒಯ್ಯಬೇಕೆಂದೂ ವಿಧಿಯಿದೆ.

ಈಗ ಗೃಹಣಿಯ ಕರ್ತವ್ಯಗಳೇನೆಂಬುದನ್ನು ನೋಡೋಣ. ಈಕೆಯು ಯಜಮಾನನು ನಡೆಯಿಸುವ ಎಲ್ಲಾ ಕರ್ಮಗಳಲ್ಲಿಯೂ ಎಲ್ಲಾ ವಿಧದಿಂದಲೂ ಸಹಾಯಕಗಳಾಗಬೇಕಾಗುವದು. ಅಗ್ನಿಪರಿಚರ್ಯೆಯ ಜೊತೆಗೆ, ದೇವಪಿತೃ ಕಾರ್ಯಗಳಿಗೆ ಸಿದ್ಧಗೊಳಿಸುವದು, ಅತಿಥಿಸತ್ಕಾರಕ್ಕಾಗಿ ಪಾಕಮಾಡುವದು, ಮನೆಯಲ್ಲಿ ಮಕ್ಕಳು ಮರಿಗಳನ್ನು, ದನಕರುಗಳನ್ನು, ಸೇವಕರನ್ನು ನೋಡಿಕೊಳ್ಳುವುದು, ಯಜಮಾನನಿಗೆ ತಾನೇ ಸೇವೆ ಮಾಡುವದು-ಇತ್ಯಾದಿ ಹೆಚ್ಚಿನ ಜವಾಬ್ದಾರಿಗಳೆಲ್ಲವೂ ಗೃಹಿಣಿಯದೇ ಆಗಿರುವದು. ಆಕೆಯು ಕರ್ಮಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಡದೇ ಇದ್ದರೆ ಗೃಹಸ್ಥನು ಯಾವ ಧರ್ಮವನ್ನೂ ಅನುಷ್ಠಾನ ಮಾಡಲು ಸಾಧ್ಯವಾಗುವದಿಲ್ಲ. ಒಂದರ್ಥದಲ್ಲಿ ಗೃಹಿಣಿಯು ಅರ್ಧಭಾಗವಾದರೆ ಪುರುಷನು ಅರ್ಧಭಾಗವೆಂದು ತಿಳಿಯಬೇಕು. ಒಂದೇ ಕಾಳಿನ ಎರಡು ಬೇಳೆಗಳಂತೆ ಸತಿಪತಿಯರು ಇದ್ದುಕೊಂಡಿರುವರು. ಹಾಗೆಯೇ ಇವರಿಬ್ಬರ ಹೃದಯವೂ ಸಂಕಲ್ಪವೂ ಮನಸ್ಸೂ ಒಂದಾಗಿರಬೇಕು. ಧಾರ್ಮಿಕ ಪ್ರವೃತ್ತಿಯಲ್ಲಿ ಪುರುಷನಿಗಿಂತ ಸ್ತ್ರೀಯೆ ಒಂದು ಹೆಜ್ಜೆ ಮುಂದಿರಬೇಕು. ಮನೆಯಬಾಗಿಲಿಗೆ ಭಿಕ್ಷೆ ಬೇಡಲು ಬರುವವರು 'ಅಮ್ಮಾ' 'ತಾಯಿ', ಎಂದೇ

ಪ್ರಾರ್ಥಿಸುತ್ತಾರೆ. ಸಂಸ್ಕೃತಭಾಷೆಯಲ್ಲಿಯೂ 'ಭವತಿ ಭಿಕ್ಷಾಂ ದೇಹಿ' ಎಂದೇ ಹೇಳುತ್ತಾರೆ. ಭವತಿ-ಎಂದರೆ ಪೂಜ್ಯಳೆ ಎಂದರ್ಥ. ಆದ್ದರಿಂದ ಮನೆಯಲ್ಲಿದ್ದು ಕೊಂಡು ಧಾರ್ಮಿಕಕರ್ಮಗಳಿಗೆ ಸಹಾಯಕಳಾಗಿ ಗೃಹಕೃತ್ಯ ಗಳನ್ನೆಲ್ಲ ನಿರ್ವಹಿಸುತ್ತಾ ಮನೆಗೆ ಬಂದವರಿಗೆ ಆತಿಥ್ಯಮಾಡುವವಳಾಗಿ ದೇವತಾರಾಧನೆ, ಕುಟುಂಬಭರಣಾದಿಗಳಿಂದ ಗೃಹವನ್ನು ತುಂಬಿರುವ ಗೃಹಿಣಿ ಯನ್ನು ''ಗೃಹಲಕ್ಷ್ಮಿ''ಯೆಂದೇ ನಮ್ಮಲ್ಲಿ ಕರೆಯುವದು ವಾಡಿಕೆಯಾಗಿದೆ. ಆದ್ದರಿಂದಲೇ ವೇದವು ''ಪತ್ನಿಯರೆಂದರೆ ಮಹಾಲಕ್ಷ್ಮಿಯ ಸ್ವರೂಪರು'' ಎಂದೇ ತಿಳಿಸುತ್ತಿದೆ. ಇಂಥ 'ಆದರ್ಶಸತಿ'ಯರೇ ಭಾರತಸಂಸ್ಕೃತಿಯ ಬಂಡವಾಳವಾಗಿರುತ್ತಾರೆ. ಈಗಲೂ ಅಲ್ಪಸ್ವಲ್ಪವಾದರೂ ನಮ್ಮಲ್ಲಿ ಧರ್ಮ, ಸದಾಚಾರಗಳು ಉಳಿದಿದ್ದರೆ ಅವು ಗೃಹಿಣಿಯರಿಂದಲೇ - ಎಂದು ಧಾರಾಳವಾಗಿ ಹೇಳಬಹುದು. ಗೃಹಿಣಿಯೇ ಗೃಹದೀಪವು. ಆಕೆಯು ಇದ್ದರೆ ಮನೆಯನ್ನು 'ಭವನ'ವೆನ್ನುವರು. ಗೃಹಿಣಿಯಿಲ್ಲದ ಭವನದಲ್ಲಿ 'ಭ'ಕಾರವು ಲೋಪವಾಗಿ ಅದು ವನ(ಕಾಡು)ವಾಗುವದು. ಆದ್ದರಿಂದ ಭವನ-ಎಂದರೆ ಮನೆಯಿರುವದು ಗೃಹಿಣಿಗಾಗಿಯೇ ಎಂದು ಹೇಳಬಹುದು.

ಲೌಕಿಕವಾಗಿಯೂ ಗೃಹಿಣಿಯ ಪಾತ್ರವು ತುಂಬ ಮಹತ್ತ್ವದ್ದಾಗಿದೆ. ಗೃಹದ ಅಲಂಕಾರ, ಸ್ವಚ್ಛತೆ, ಒಪ್ಪ ಓರಣಗಳು - ಇವು ಗೃಹಿಣಿಯ ಮನಸ್ಸನ್ನು ಅವಲಂಬಿಸಿರುತ್ತದೆ. ಗೃಹದಲ್ಲಿ ಕಳೆ (ತೇಜಸ್ಸು) ತುಂಬಿರಬೇಕಾದರೆ ಗೃಹಿಣಿಯು ತೃಪ್ತಳಾಗಿದ್ದು ಶಾಂತಮನಸ್ಕಳಾಗಿರಬೇಕು. ಆಕೆಯ ನಡೆನುಡಿ ಗಳು ಪರಿಶುದ್ಧವಾಗಿಯೂ ಪ್ರೇಮಮಯವಾಗಿಯೂ ಇರಬೇಕು. ನಿಜವಾಗಿ ಹೇಳುವದಾದರೆ ಉತ್ತಮ ಗೃಹಿಣಿಯನ್ನು ಪಡೆಯಬೇಕಾದರೆ ಗೃಹಸ್ಥನು ತಪಸ್ಸನ್ನೇ ಮಾಡಿರಬೇಕಾಗುವದು. ಆಕೆಯ ಪಾತಿವ್ರತ್ಯ, ಮಾಂಗಲ್ಯಯೋಗ ಗಳಿಂದ ಗಂಡನ ಆಯುಷ್ಯವು ಅಭಿವೃದ್ಧಿಯಾಗುವದು. ಆದ್ದರಿಂದ ಪತಿವ್ರತೆ ಯಾದ ಹಾಗೂ ಗುಣಶೀಲಳಾದ ಸತಿಯನ್ನು ಯಜಮಾನನು ದೇವತೆ ಯಂತೆಯೇ ಭಾವಿಸಿ ಗೌರವಿಸಬೇಕು. ಆಕೆಯ ಕಣ್ಣಿನಿಂದ ಶೋಕಜಲವು

ಬರದಂತೆ ನೋಡಿಕೊಳ್ಳುವದು ಗಂಡನ ಕರ್ತವ್ಯ. ಹಾಗೂ ಸಾಧ್ಯವಾದ ಮಟ್ಟಿಗೂ ಆಕೆಯ ಸಕಾರಣವೂ ಧರ್ಮಾವಿರುದ್ಧವೂ ಆದ ಆಶೆಗಳನ್ನು ಯಜಮಾನನು ಪರಿಪೂರ್ತಿಗೊಳಿಸಬೇಕು. ಅದಕ್ಕೆ ತಕ್ಕಂತೆ ಆಕೆಯೂ ತನ್ನ ಗುಣಶೀಲಗಳಿಂದ ಕುಟುಂಬದ ಎಲ್ಲ ಸದಸ್ಯರ ಹೃದಯಗಳನ್ನೂ ಗೆಲ್ಲಲು ಪ್ರಯತ್ನಿಸಬೇಕು. ಇಂಥ ಪತ್ನಿಯು 'ಶ್ರೀ' ರೂಪಳೇ ಆಗಿರುತ್ತಾಳೆಂಬುದರಲ್ಲಿ ಸಂಶಯವೇನಿದ್ದೀತು ?

## 8. ಮಾತೃದೇವೋ ಭವ

ನಮ್ಮ ಸಂಸ್ಕೃತಿಯಲ್ಲಿ ಗೃಹಿಣಿಯಾದಂಥ ಸ್ತ್ರೀಗೆ ಸಲ್ಲುವ ಅತ್ಯುಚ್ಚ ಪದವಿ ಹಾಗೂ ಗೌರವವೆಂದರೆ ಮಾತೃಸ್ಥಾನವು. ಮಾತಾ ಎಂಬ ಶಬ್ದವು ವಿಶೇಷ ಪೂಜ್ಯವಾಗಿದೆ. ವ್ಯವಹಾರದಲ್ಲಿಯೂ ಪುರುಷನಿಗೆ ತನ್ನ ಹೆಂಡತಿ ಹೊರತು ಉಳಿದ ಎಲ್ಲಾ ಹಿರಿಯಸ್ತ್ರೀಯರನ್ನೂ ತಾಯಿಯೆಂದೇ ಭಾವಿಸಬೇಕೆಂದು ಶಾಸ್ತ್ರಗಳು ತಿಳಿಸುತ್ತವೆ. ಮಾತೃಭಾಷೆ, ಮಾತೃಭೂಮಿ-ಮುಂತಾಗಿ ಭಾಷೆ, ದೇಶಗಳನ್ನು ಕೂಡ ತಾಯಿಯೆಂಬ ಪದದಿಂದಲೇ ಗೌರವಿಸಲಾಗಿದೆ. ಜಗತ್ತಿನಲ್ಲಿ ಯಾವನೊಬ್ಬನೂ ತಾಯಿಯಿಲ್ಲದೆ ಜನ್ಮವೆತ್ತಲಾರನು ಮತ್ತು ಬೆಳೆಯಲಾರನು. ಶಿಶುವಾದಾಗಲೇ ತಾಯಿಯು ಮೃತಳಾದರೂ 'ಸಾಕುತಾಯಿ'ಯಾದರೂ ಬೇಕೇಬೇಕು. ಅಂತೂ ತಾಯಿಯಿಲ್ಲದ ಮಗು ಬೆಳೆಯುವದಾಗಲೀ ಉದ್ಧಾರ ವಾಗುವದಾಗಲೀ ಸಾಧ್ಯವಿಲ್ಲ. ಆದ್ದರಿಂದ ಗೃಹಿಣಿಯು ಮಾತೆಯಾದಾಗ ಆಕೆಯ ಗೌರವವು ಮತ್ತಷ್ಟು ಹೆಚ್ಚಲಿದೆ. ಒಬ್ಬ ತಾಯಿಯು ನಾಲ್ಕಾರು ಮಕ್ಕಳನ್ನು ತನ್ನ ಸುಖವನ್ನು ತೊರೆದಾದರೂ ಸಾಕಬಲ್ಲಳು. ಆಕೆಯ ಪ್ರೇಮವು ಎಲ್ಲಾ ಮಕ್ಕಳಲ್ಲಿಯೂ ಪರಿಪೂರ್ಣವಾಗಿಯೇ ಇರುತ್ತದೆ. "ಮಾತೃವಾತ್ಸಲ್ಯ"ದ ರುಚಿಯನ್ನು ಕಾಣದವನು ನಿರ್ಭಾಗ್ಯನೇ ಸರಿ. ಯಾವನ ಅಂತಃಕರಣವು ತಾಯಿಯ ವಿಷಯದಲ್ಲಿಯೂ ಕರಗದೆ ಇರುವದೋ ಅಂಥವನು ಬದುಕಿದ್ದೂ ವ್ಯರ್ಥವೇ ಸರಿ. ಆದ್ದರಿಂದ ತಾಯಿಯನ್ನು ದೇವರೆಂದೇ ಗೌರವಿಸಬೇಕೆಂದು

ಶಾಸ್ತ್ರಗಳಲ್ಲಿ ತಿಳಿಸಿರುತ್ತದೆ. ಮಾತೃಭಕ್ತಿಗೆ ಉದಾಹರಣೆಯಾದ ಅನೇಕ ಕಥೆಗಳನ್ನು ನಾವು ಪುರಾಣಗಳಲ್ಲಿ ಕೇಳಿರುತ್ತೇವೆ. ಸಂನ್ಯಾಸಿಯಾದವನು ಕೂಡ ತಾಯಿಗೆ ನಮಸ್ಕರಿಸಬೇಕೆಂತ ಶಾಸ್ತ್ರವಿಧಿಯಿದೆ. ಹೀಗೆ ಸಂಪೂರ್ಣಗೌರವ, ಸ್ವಾತಂತ್ರ್ಯ, ಹಿರಿಮೆಗಳನ್ನೆಲ್ಲ ಹೆಂಗಸರಿಗೇ ಸನಾತನಧರ್ಮದಲ್ಲಿ ಕೊಡ ಲಾಗಿದೆ. ಆದರೂ ಈಗಿನ ನಾಗರೀಕರೆನಿಸಿಕೊಂಡಿರುವ ಬಾಹ್ಯದೃಷ್ಟಿಯ ಜನರು ಸ್ತ್ರೀಯು ಹಿಂದಿನ ಕಾಲದಲ್ಲಿ ಶೋಷಣೆಗೆ ಒಳಗಾಗಿದ್ದಳೆಂದೂ ಆಕೆಗೂ ಪುರುಷನಷ್ಟೇ ಸ್ವಾತಂತ್ರ್ಯವು ಬೇಕೆಂದೂ ಕೂಗುತ್ತಾ ಸನಾತನಧರ್ಮವನ್ನು ದೂಷಿಸುತ್ತಾರೆ. ಇದು ಅವರ ಸಂಕುಚಿತದೃಷ್ಟಿಯೇ ಹೊರತು ಬೇರೇನೂ ಅಲ್ಲ. ''ಸ್ತ್ರೀಯರು ಎಲ್ಲಿ ಪೂಜಿಸಲ್ಪಡುವರೋ ಅಲ್ಲಿ ದೇವತೆಗಳೆಲ್ಲ ಕುಣಿದಾಡುತ್ತಿರುವರು'' ಎಂದೇ ಸ್ಮೃತಿಕಾರರೂ ತಿಳಿಸಿದ್ದಾರೆ. ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ದೇವತಾರಾಧನಪದ್ಧತಿಗಳಲ್ಲಿ ಭಗವಂತನನ್ನು ತಾಯಿ(ದೇವಿ) ಯೆಂದೇ ಪೂಜಿಸುವದೂ ಒಂದು ಸುಪ್ರಸಿದ್ಧಪಂಥವಾಗಿದೆ. ಭಾರತದೇಶದ ಮೂಲೆ ಮೂಲೆಗಳಲ್ಲೂ ದೇವೀಪೂಜೆಯೂ ಶಕ್ತಿದೇವಾಲಯಗಳೂ ಹರಡಿಕೊಂಡಿವೆ. ತಂದೆಗಿಂತ ತಾಯಿಯನ್ನು ಮೆಚ್ಚಿಸುವದು ಸುಲಭ. ಏಕೆಂದರೆ ಆಕೆಗೆ ಮಕ್ಕಳ ಮೇಲೆ ಅಪಾರವಾದ ಕರುಣೆಯಿರುತ್ತದೆ-ಎಂಬ ಕಾರಣದಿಂದ ದೇವಿಯ ಪೂಜಾರಾಧನೆಗಳನ್ನು ನಾವುಗಳು ಮಾಡುವೆವು. ಹೀಗೆಲ್ಲ ತಾಯಿಯ ಮಹಿಮೆಯು ಹರಡಿರುವದು. ಆದ್ದರಿಂದ ಸ್ತ್ರೀರೂಪವನ್ನು ದೇವಿಯೆಂದೇ ಭಾವಿಸುವ ವಿಶಿಷ್ಟಸಂಸ್ಕೃತಿಯ ನೆರಳಿನಲ್ಲಿ ನೋಡಿದಾಗ ಹೆಂಗಸು ಎಂದೆಂದಿಗೂ ಹೆಂಗಸಾಗಿಯೇ ಮತ್ತು ಗೃಹಿಣಿಯಾಗಿಯೇ ಉಳಿಯ ಬೇಕೆಂದೇ ಏರ್ಪಡುತ್ತದೆ - ಆಗಲೇ ನಾವು ಉದ್ಧಾರವಾಗುವೆವು-ಎಂದು ಧಾರಾಳವಾಗಿ ಹೇಳಬಹುದು.

ಈಗ ಪ್ರಕೃತವಿಚಾರಕ್ಕೆ ಬರೋಣ. ಮನೆಯನ್ನು ತುಂಬುವ ಗೃಹಿಣಿಯ ಮಹತ್ತ್ವವನ್ನು ಅರಿತ ಅನಂತರ ಮನೆ ಎಂಬಿದರ ನಿಜವಾದ ಅರ್ಥವನ್ನೂ ಅದರ ಪೂರ್ಣತೆಯನ್ನೂ ವಿಚಾರಮಾಡೋಣ.

## 9. ಗೃಹಾನ್ ಭದ್ರಾನ್ ಸುಮನಸಃ ಪ್ರಪದ್ಯೇ

ಮನೆಯನ್ನು ಒಳಹೊಗುವದನ್ನು ಗೃಹಪ್ರವೇಶವೆನ್ನುವರು. ಇದು ಮೂರು ವಿಧವಾಗಿರುವದು. ಪ್ರವೇಶಕ್ಕೆ ಶಾಸ್ತ್ರಕಾರರು ಕಾಲವನ್ನು ಗೊತ್ತು ಮಾಡಿರುತ್ತಾರೆ. ಮೊದಲನೆಯದಾಗಿ ಗೃಹಿಣಿಯಾಗಿ ದೀಕ್ಷೆಯನ್ನು ಸ್ವೀಕರಿಸಿದ ನೂತನವಧುವು ಗೃಹವನ್ನು ಪ್ರವೇಶಿಸುವದು ಬಹುಮುಖ್ಯವಿಷಯವಾಗಿದೆ. ಏಕೆಂದರೆ ಆಕೆಯ ಅದೃಷ್ಟದಿಂದಲೇ ಹೊಸಮನೆಯಾಗಲಿ, ಮನೆಯ ಅಭ್ಯುದಯವಾಗಲಿ, ಉಂಟಾಗಬೇಕಾಗಿದೆ. ಆದ್ದರಿಂದ ನೂತನವಧುಗೃಹ ಪ್ರವೇಶವೇ ಮುಂದೆ ನವಗೃಹಪ್ರವೇಶಕ್ಕೆ ನಾಂದಿಯಾಗಿರುತ್ತದೆ. ವಿವಾಹಾ ನಂತರ ಪ್ರಪ್ರಥಮವಾಗಿ ಮಾಡುವ ಪ್ರವೇಶವೇ ಇಲ್ಲಿ ಪ್ರಕೃತವಾದುದು. ಇದು ರಾತ್ರಿಯಲ್ಲಿಯೇ ಆಗಬೇಕೆಂಬುದು ನಿಯಮ, ವಧು ಪ್ರವೇಶವು ರಾತ್ರಿಯ ಲ್ಲಿಯೂ ರಾಜನ ಪ್ರವೇಶವು ಹಗಲಿನಲ್ಲಿಯೂ ನಡೆಯಬೇಕು. ಹೊಸ ಮನೆಯ ಪ್ರವೇಶಕ್ಕೆ ಹಗಲು, ರಾತ್ರಿ-ಎರಡೂ ಪ್ರಶಸ್ತವೆಂದು ಸ್ಮೃತಿವಾಕ್ಯವಿದೆ. ಇದೇ ಪ್ರವೇಶದ ಮೂರು ವಿಧಗಳು. ಆದ್ದರಿಂದ ವಧೂ ಗೃಹಪ್ರವೇಶದ ಸಂದರ್ಭ ದಲ್ಲಿ ವೇದದಲ್ಲಿ ವರ್ಣಿಸಿರುವ ಈ ಮಂತ್ರಗಳ ಅಭಿಪ್ರಾಯವನ್ನು ನೋಡಿರಿ.

'ವಧುವಾದ' ನಾನು ಮನಸ್ಸಂತೋಷಕರವಾದ, ಒಳ್ಳೆಯ ಅತ್ತೆಮಾವಂದಿ ರಿಂದ ಕೂಡಿರುವ ಗೃಹವನ್ನು ಹೊಂದುವೆನು. ಇಂಥ ನಾನು ಸಮೃದ್ಧಿಯ ಮೈದುನಂದರಿಂದ, ಮತ್ತು ಮಕ್ಕಳಿಂದಲೂ, ಒಳ್ಳೆಯ ಪಾಲಕರಿಂದಲೂ ಕೂಡಿದ, ಅನ್ನಸಮೃದ್ಧಿಯುಳ್ಳ, ಬ್ರಾಹ್ಮಣರ ಸಂತರ್ಪಣೆಯಿಂದ ಎಲ್ಲಾ ಕಡೆಯಲ್ಲಿಯೂ ತುಪ್ಪವು ಚೆಲ್ಲಾಡಿರತಕ್ಕಂಥ ಉತ್ತಮವಾದ ಮನೆಯನ್ನು ಮನಸ್ಸಿನಿಂದ ಪ್ರವೇಶಮಾಡಿದ್ದೇನೆ.

ಹೀಗೆಂದು ಗೃಹಣಿಯು ಚಿಂತಿಸುತ್ತಾ ಪ್ರವೇಶಿಸಬೇಕು. ಯಜಮಾನ ನಾದರೋ ಹೀಗೆ ಪ್ರಾರ್ಥನೆಮಾಡಬೇಕು.

"ಈ ಮನೆಗೆ ಬಂದಿರತಕ್ಕ ನನ್ನ ಹೆಂಡತಿಯು ಗೃಹಪಾಲಕಳಾಗಿ, ಗೋವುಗಳಿಂದಲೂ, ಅಶ್ವಗಳಿಂದಲೂ, ಪ್ರಜೆಗಳಿದಂಲೂ ಕೂಡಿದವಳಾಗಿ ಸ್ವರ್ಗಸುಖಕ್ಕೆ ಕಾರಣಳಾಗಿ ಈ ಔಪಾಸನಾಗ್ನಿಯನ್ನು ನೂರುವರ್ಷಗಳವರೆಗೆ ರಕ್ಷಿಸುವದಕ್ಕೆ ಯೋಗ್ಯಳಾಗಲಿ ! ಈಕೆಯಿಂದ ರಕ್ಷಿಸಲ್ಪಟ್ಟ ಅಗ್ನಿಯು ತನ್ನ ಗೃಹಕ್ಕೆ ಪಾಲಕನಾಗಿದ್ದುಕೊಂಡು ಧನವನ್ನೂ ಪುಷ್ಟಿಯನ್ನೂ ಪ್ರಜೆಗಳನ್ನೂ ಭಗಾದಿ ದೇವತೆಗಳಿಗೆ ಕೊಟ್ಟಂತೆಯೇ ನಮಗೂ ಕೊಡಲಿ ! ಈ ಮನೆಯಲ್ಲಿ ಗೋವುಗಳೂ ಅಶ್ವಗಳೂ ಮತ್ತು ಪುರುಷನೂ ಅಧಿಕವಾಗಿ ಹುಟ್ಟಲಿ ಮತ್ತು ಅನೇಕದಾನಗಳಿಗೆ ಯೋಗ್ಯವಾದ ಧನಪುಷ್ಟಿಯೂ ಆಗಲಿ !

ಕೊನೆಯಲ್ಲಿ ಈ ಆಶಂಸನೆಯಿದೆ :

ಮಂತ್ರ: ಸುಮಂಗಲೀರಿಯಂ ವಧೂರಿಮಾಂಗ್ಂ ಸಮೇತ ಪಶ್ಯತ ।
ಸೌಭಾಗ್ಯಮಸ್ಯೈ ದತ್ವಾ ಯಾಥಾಸ್ತಂ ವಿಪರೇತನ ॥

ಅರ್ಥ : ಎಲೈ ಪ್ರೇಕ್ಷಕರಾದ ಸಭಾಸದರೆ, ಸುಮಂಗಲಿಯಾದ ಈ ವಧುವನ್ನು ನೋಡಿ ಇವಳಿಗೆ ಸೌಭಾಗ್ಯವನ್ನು ಕೊಟ್ಟು ಅನಂತರ ನಿಮ್ಮ ಗೃಹಗಳಿಗೆ ಯಥೇಷ್ಟವಾಗಿ ಹೋಗಿರಿ !

ಈ ಪ್ರಾರ್ಥನೆಗಳನ್ನು ನೋಡಿದರೆ ಗೃಹಣಿಯಾಗುವವಳಿಗೆ ಎಂಥ ಸ್ಥಾನ ಮಾನಗಳು ದೊರಕುತ್ತವೆ-ಎಂಬುದು ಅರ್ಥವಾಗುತ್ತದೆ. ಇಂಥ ಗೃಹಿಣಿ ಯಿದ್ದಲ್ಲಿ ಮಾತ್ರವೇ ಮನೆಯು ಗೃಹವೆನಿಸಿಕೊಳ್ಳುವದು. ಹೀಗೆ ಗೃಹಸ್ಥನು ಗೃಹದಲ್ಲಿಯೇ ಅನುಷ್ಠಾನಮಾಡಬೇಕಾದ ಕರ್ಮಗಳಿಗಾಗಿ ಗೃಹವನ್ನು ನಿರ್ಮಿಸಿಕೊಳ್ಳಬೇಕಾಗಿದೆ ಮತ್ತು ಗೃಹಸ್ಥನು ತನ್ನ ಮಕ್ಕಳಿಗೆ-ಅದರಲ್ಲಿಯೂ ವಿಶೇಷವಾಗಿ ಗಂಡುಮಕ್ಕಳಿಗೆ ನಡೆಯಿಸಬೇಕಾದ ಸಂಸ್ಕಾರ ಕರ್ಮಗಳನ್ನು ಗೃಹದಲ್ಲಿಯೇ ನಡೆಯಿಸಬೇಕೆಂಬ ನಿಯಮವಿದೆ. ಕೆಲವು ಹೋಮಗಳನ್ನು ಗೃಹ್ಯಾಗ್ನಿ (ಗೃಹದಲ್ಲಿಟ್ಟುಕೊಂಡಿರುವ ಅಗ್ನಿ) ಯಲ್ಲಿಯೇ ಮಾಡಬೇಕು. ಸಂಸ್ಕಾರಗಳೆಂದರೆ ಮಕ್ಕಳಿಗೆ ಮಾಡುವ ಸೀಮಂತ, ನಾಮಕರಣ, ಅನ್ನಪ್ರಾಶನ, ಚೌಲ, ಉಪನಯನ, ವಿವಾಹಾದಿಗಳು-ಇವುಗಳನ್ನು ಮಾಡುವಾಗ ಬಂಧು

ಗಳೂ ನೆಂಟರಿಷ್ಟರೂ ಸೇರುವದರಿಂದ ಮನೆಯು ಸಾಕಷ್ಟು ವಿಶಾಲವಾಗಿಯೇ ಇರಬೇಕೆಂದು ಸಿದ್ಧವಾಗುತ್ತದೆ. ಆದ್ದರಿಂದ ಇನ್ನು ಮುಂದೆ ನೂತನಗೃಹದ ವಿಷಯವಾಗಿ ವಿಚಾರಮಾಡೋಣ.

## 10. ನ ಕಂಚನ ವಸತೌ ಪ್ರತ್ಯಾಚಕ್ಷೀತ

ಗೃಹಸ್ಥನಾದವನಿಗೆ ಶಾಸ್ತ್ರದಲ್ಲಿ ವಿಧಿಸಿರುವ ಮುಖ್ಯ ಕರ್ಮಗಳಲ್ಲಿ ಅತಿಥಿಸತ್ಕಾರಕ್ಕೆ ಅಗ್ರಸ್ಥಾನವಿರುವದು. ಅತಿಥಿ-ಎಂದರೆ ಅಪರಿಚಿತನಾಗಿದ್ದು ಮಧ್ಯಾಹ್ನಕಾಲಕ್ಕೆ ಸರಿಯಾಗಿ ಬಂದು ಸಂಜೆಗೆ ಹೊರಟು ಹೋಗುವವನು. ತಿಥಿ-ಎಂದರೆ ಹಗಲು ಎಂದರ್ಥ. 'ತಿಥಿರಪಿ ನ ತಿಷ್ಠತಿ ಇತ್ಯತಿಥಿಃ' - ಎಂದರೆ ಒಂದು ಹಗಲು ಕೂಡ ನಿಲ್ಲದೆ ಇರುವವನು ಅತಿಥಿಯೆನಿಸುವನು. ಪರಿಚಿತನಾದವನು ಬಂದರೆ 'ಅಭ್ಯಾಗತ'ನೆಂದು ಕರೆಯುತ್ತಾರೆ. ಹೀಗೆ ಅತಿಥಿ ಅಭ್ಯಾಗತರು ಮನೆಗೆ ಬಂದಾಗ ಜಾಗವಿಲ್ಲ ಎನ್ನಕೂಡದು-ಎಂದು ಶಾಸ್ತ್ರವಿದೆ. ಜಾಗವನ್ನು ಕೊಟ್ಟಮೇಲೆ ಅನ್ನವನ್ನು ಕೊಡಲೇಬೇಕು. ಆದ್ದರಿಂದ ಗೃಹಸ್ಥನು ಹೇಗಾದರೂಮಾಡಿ ಬಹಳ ಅನ್ನವನ್ನು ಸಂಪಾದಿಸಬೇಕು. ಏಕೆಂದರೆ ಅನ್ನದಾನಕ್ಕೆ ಒಳ್ಳೆಯ ಮಹತ್ವವಿದೆ-ಎಂದು ಶ್ರುತಿಯಲ್ಲಿ ತಿಳಿಸಿದೆ. ಆದ್ದರಿಂದ ಸತ್ಪುರುಷರ ಗೃಹ ಎಂದರೆ ಈ ಕೆಳಕಂಡಂತೆ ಇರಬೇಕು. ಈ ಸುಭಾಷಿತವನ್ನು ನೋಡಿರಿ.

ತೃಣಾನಿ ಭೂಮಿರುದಕಂ ವಾಕ್ ಚತುರ್ಥೀ ಚ ಸೂನೃತಾ ।
ಏತಾನಿ ಚ ಸತಾಂ ಗೇಹೇ ನೋಚ್ಛಿದ್ಯಂತೇ ಕದಾಚನ ॥

ತೃಣವೆಂದರೆ ಒಂದು ಆಸನ (ಕುಳಿತುಕೊಳ್ಳುವ ಚಾಪೆ), ಭೂಮಿ ಎಂದರೆ ಕೂಡುವ ಸ್ಥಳ, ಒಂದು ಲೋಟ ಕುಡಿಯುವ ನೀರು, ಒಳ್ಳೆಯ ಮಾತು-ಈ ನಾಲ್ಕು ವಸ್ತುಗಳಿಗೆ ಸತ್ಪುರುಷರ ಮನೆಯಲ್ಲಿ ಎಂದಿಗೂ ಅಭಾವವಿರುವದಿಲ್ಲ-ಎಂದು ತಿಳಿಸಲಾಗಿದೆ. ಮನೆ ಎಂದರೆ ಇಷ್ಟು ಉಪಚಾರ ಗಳು ಅತಿಥಿಗಳಿಗೆ ದೊರಕಲೇಬೇಕು ಎಂದಭಿಪ್ರಾಯ. ಇನ್ನು ಮನೆಯು ಅದರಲ್ಲಿ ವಾಸಮಾಡುವವರ ಅವಶ್ಯಕತೆಗಳನ್ನು ಪೂರೈಸತಕ್ಕದ್ದಾಗಿರಬೇಕು

ಮತ್ತು ಮನೆಯು ದೊಡ್ಡದಾದಂತೆಲ್ಲ ಯಜಮಾನನ ಮನಸ್ಸೂ ದೊಡ್ಡದಾಗ ಬೇಕು. ಹಾಗಾದರೆ ಬಂಧುಮಿತ್ರರು ಬರುವರು. ನಮ್ಮಲ್ಲಿ ಒಬ್ಬ ಹಿರಿಯರು 'ಮನೆಯು ಸಾಲದು, ಇಲ್ಲಿರುವ ಜನರಿಗೆ ಇನ್ನೂ ಜಾಗವು ಬೇಕು' - ಎನ್ನುವಂತೆಯೇ ಇರಬೇಕು. ಅದಕ್ಕೆ ಬದಲಾಗಿ 'ಮನೆ ಬಹಳ ದೊಡ್ಡದು ; ಅದಕ್ಕೆ ತಕ್ಕ ಜನರೇ ಸಾಲದು', ಎನ್ನುವಂತಿರಬಾರದು-ಎಂದು ಹೇಳುತ್ತಿದ್ದರು. ಇದು ನಿಜ. ಬಹಳ ದೊಡ್ಡಮನೆಯಾಗಿದ್ದು ಒಬ್ಬಿಬ್ಬರೇ ಜನರಿದ್ದರೆ ಆ ಮನೆಯು ಬಿಕೋ ಎನ್ನುತ್ತಿರುತ್ತದೆ. ಅದರಲ್ಲಿ ಸತ್ವವೇ ಇರುವದಿಲ್ಲ. ಆದರ ಬದಲಾಗಿ ಮನೆಯು ಹೆಂಗಸರು, ಮಕ್ಕಳು, ನೆಂಟರು, ಸೇವಕರು, ಅತಿಥಿಗಳು, ಅಭ್ಯಾಗತರು; ನೆರೆಹೊರೆಯವರು ಗುರುಹಿರಿಯರಿಂದ ತುಂಬಿದ್ದರೆ ತುಂಬ ಪ್ರಶಸ್ತವಾಗಿ ಕಳೆಯಿಂದ ಕೂಡಿರುತ್ತದೆ. ಇದೆಲ್ಲವೂ ಆಯಾ ಯಜಮಾನ ಮತ್ತು ಗೃಹಿಣಿಯ ಮನೋಧರ್ಮಗಳನ್ನು ಅವಲಂಬಿಸಿರುತ್ತದೆ. ಮನೆ ಎಂದಮೇಲೆ ಏನಾದರೂ ಶುಭಕಾರ್ಯಗಳು, ಉತ್ಸವಗಳು, ಹಬ್ಬಗಳು, ಭೋಜನಕೂಟಗಳು ನಡೆಯುತ್ತಿರಬೇಕು. ಪೂಜಾದಿಗಳು, ಗುರುಹಿರಿಯರ ಕಾರ್ಯಗಳು, ಇವುಗಳೂ ನಡೆಯಬೇಕು. ತೊಟ್ಟಿಲಲ್ಲಿ ಮಲಗುವ ಕೂಸಿನಿಂದ ವೃದ್ಧರವರೆಗೂ ಹಾಗೂ ಕೊಟ್ಟಿಗೆಯಲ್ಲಿ ದನಕರುಗಳವರೆಗೂ ಎಲ್ಲರಿಂದಲೂ ತುಂಬಿತುಳುಕು ತ್ತಿರಬೇಕು. ಇದೇ ನಿಜವಾದ ಮನೆಯ ಲಕ್ಷಣ. ಇಂಥ ಮನೆಯ ಯಜಮಾನನೇ ಸದ್ಗೃಹಸ್ಥನು. ಆದರೆ ಈಚಿನ ನಾಗರೀಕತೆಯ ಪ್ರಭಾವದಿಂದ ಅವಿಭಕ್ತಕುಟುಂಬದ ಪದ್ಧತಿಯು ಹರಿದು ಹಂಚಿಹೋಗಿದ್ದು ಈ ವೈಭವಗಳನ್ನು ಕಾಣುವದೇ ಅಪರೂಪವಾಗಿದೆ. ಅಂತೂ ಆದರ್ಶವಾದ ಮನೆ ಎಂದರೆ ಹೀಗಿರಬೇಕು ಎಂದು ಭಾವಿಸಬಹುದಾಗಿದೆ.

## 11. ಗೃಹ್ಯಕರ್ಮಗಳು

ಈಗ ಮನೆಯಲ್ಲಿ ನಡೆಯಿಸಬೇಕಾಗಿರುವ ಕೆಲವು ಕರ್ಮಗಳ ವಿಷಯ ವಾಗಿ ವಿಚಾರಮಾಡೋಣ. ಕರ್ಮಗಳು ವೈದಿಕ, ತಾಂತ್ರಿಕ ಅಥವಾ ಪೌರಾಣಿಕ ಎಂದು ಎರಡು ವಿಧವಾಗಿರುವವು. ಪೌರಾಣಿಕವನ್ನೇ ಸ್ಮಾರ್ತ

ಕರ್ಮವೆಂದೂ ಕರೆಯುತ್ತಾರೆ. ಬಹಳಮಟ್ಟಿಗೆ ವೈದಿಕಕರ್ಮಗಳು ಅಗ್ನಿಮುಖ ವಾಗಿರುವವು. ಎಂದರೆ ಅಗ್ನಿಯಲ್ಲಿ ಮಾಡುವ ಹೋಮಾದಿಗಳ ರೂಪವಾಗಿರು ವವು. ಈಚೆಗೆ ಇವು ಕಡಿಮೆಯಾಗತ್ತಿವೆ. ಸ್ಮಾರ್ತಕರ್ಮಗಳು ಹೆಚ್ಚಾಗಿ ಪೂಜೆ, ದಾನ ಧರ್ಮರೂಪವಾಗಿರುವವು. ಹೇಗೂ ಈ ಕರ್ಮಗಳಲ್ಲಿ ಎಲ್ಲವೂ ಅಲ್ಲದಿದ್ದರೂ ಕೆಲವಾದರೂ ಮನೆಯಲ್ಲಿ ನಡೆಯಲೇಬೇಕು. ಇಲ್ಲದಿದ್ದರೆ ಮನೆಯನ್ನು ನಿರ್ಮಿಸಿದ ಉದ್ದೇಶವು ಸಾರ್ಥಕವಾಗುವದಿಲ್ಲ. ಈ ಕರ್ಮಗಳನ್ನು ಮತ್ತೊಮ್ಮೆ ನಿತ್ಯ, ಕಾಮ್ಯಗಳೆಂದು ವಿಂಗಡಿಸಬೇಕು. ನಿತ್ಯವೆಂದರೆ ತಪ್ಪದೆ ಪ್ರತಿದಿನವೂ ಮಾಡಬೇಕಾದದ್ದು. ಕಾಮ್ಯವೆಂದರೆ ಅವನವನ ಇಷ್ಟಾನುಸಾರ ಮಾಡಬಹುದಾದದ್ದು; ಅಥವಾ ಬಿಡಬಹುದಾದದ್ದು ; ಕಡ್ಡಾಯವಲ್ಲ-ಎಂದಭಿಪ್ರಾಯ. ಈ ವ್ಯವಸ್ಥೆಯಲ್ಲಿ ಗೃಹಪ್ರವೇಶವು ಕಾಮ್ಯವೆಂಬ ಗುಂಪಿಗೆ ಸೇರುತ್ತದೆ. ಏಕೆಂದರೆ ಅನುಕೂಲವಿದ್ದವನು ಮಾತ್ರ ಮನೆಯನ್ನು ಕಟ್ಟುತ್ತಾನೆ ; ಗೃಹಪ್ರವೇಶ ಮಾಡಿಕೊಳ್ಳುತ್ತಾನೆ. ಉಳಿದವರಿಗೆ ಅದು ಆಗದೆ ಹೋಗ ಬಹುದು.

ಈಗ ಕಾಮ್ಯವಾದ ಗೃಹಪ್ರವೇಶಕರ್ಮದ ವಿವರವನ್ನು ತಿಳಿಯೋಣ. ಈ ಸಂದರ್ಭಕ್ಕೆ ಇದು ತಕ್ಕದ್ದಾಗಿದೆ. ಗೃಹವನ್ನು ನಿರ್ಮಾಣಮಾಡುವ ಮುಂಚೆ ಆ ಸ್ಥಳದಲ್ಲಿ 'ಗುದ್ದಲಿಪೂಜೆ'ಯನ್ನು ಮಾಡುವದು ರೂಢಿಯಲ್ಲಿದೆ. ಇದನ್ನು ಯಜಮಾನನಿಗೆ ಕ್ಷೇಮವನ್ನೂ ಗೃಹನಿರ್ಮಾಣವು ಅಡ್ಡಿಯಿಲ್ಲದೆ ಹಾಗೂ ಅಪಘಾತಗಳಿಲ್ಲದೆ ಸುಖಮುಖವಾಗಿ ನೆರವೇರಬೇಕೆಂಬುದನ್ನೂ ಉದ್ದೇಶಿಸಿ ಮಾಡಲಾಗುವದು. ಹಿಂದಿನಕಾಲದಲ್ಲಿ ಯಜ್ಞವನ್ನು ಮಾಡುವಾಗ ಭೂಮಿ ಯನ್ನು ಶೋಧಿಸುವ ಪದ್ಧತಿಯು ಇತ್ತು. ಹಾಗೆಯೇ ಗೃಹನಿರ್ಮಾಣಕ್ಕೂ ಭೂಶುದ್ಧಿಯನ್ನು ಹೇಳಿದೆ. 'ಯದ್ಭೂಮೇಃ ಕ್ರೂರಂ ತದಿತೋ ಹರಾಮಿ' ('ಭೂಮಿಯಲ್ಲಿರುವ ಕ್ರೂರವಾದ ವಸ್ತುಗಳನ್ನು ಇಲ್ಲಿಂದ ಹೊರಹಾಕುತ್ತೇನೆ') - ಎಂಬ ವೇದದಲ್ಲಿರುವ ಪ್ರಾರ್ಥನೆಯಿಂದ ಸ್ಥಳಶುದ್ಧಿಯನ್ನು ಮಾಡಿ ಅನಂತರ ನಿರ್ಮಾಣವನ್ನು ಪ್ರಾರಂಭಿಸಬೇಕು. ಇನ್ನು ಗೃಹನಿರ್ಮಾಣದ ವಿಷಯವಾಗಿ ವಿಚಾರಮಾಡೋಣ.

## 12. ಶಿವಂ ವಾಸ್ತು

ಗೃಹವು ನೆಲಗಟ್ಟಿನ ನಿರ್ಮಾಣದಿಂದ ಪ್ರಾರಂಭವಾಗುತ್ತದೆ. ಮೊದಲು ಬಯಲಾಗಿದ್ದ ಪ್ರದೇಶವು ಗೋಡೆಗಳು ಕಂಬಗಳು ಇವುಗಳ ನಿರ್ಮಾಣವಾದ ಮೇಲೆ ಗೃಹವೆನಿಸಲಾರಂಭಿಸುತ್ತದೆ. ಈ ಗೃಹದೇವತೆಯನ್ನು 'ವಾಸ್ತು' ಎಂಬ ಹೆಸರಿನಿಂದ ಕರೆಯುತ್ತಾರೆ. ವಾಸ್ತುಪುರುಷ , ವಾಸ್ತೋಷ್ಪತಿ-ಎಂಬ ಹೆಸರುಗಳೂ ಗೃಹದೇವತೆಯನ್ನೇ ಕುರಿತದ್ದಾಗಿರುವದು. ಗೃಹವು ಇಂಥಿಂಥ ದಿಕ್ಕಿನ ಬಾಗಿಲಿನಿಂದ ಕೂಡಿದ್ದರೆ ಆಯಾ ಯಜಮಾನರಿಗೆ ಶ್ರೇಯಸ್ಕರವೆಂದು ಜ್ಯೋತಿಷ್ಯರು ಹೇಳುತ್ತಾರೆ. ಜ್ಯೋತಿಷ್ಯಶಾಸ್ತ್ರದಲ್ಲಿ 'ವಾಸ್ತುಪ್ರಕರಣ' ವೆಂಬ ವಿಭಾಗವೇ ಇಂಥ ವಿಷಯಗಳಿಗೆ ಮೀಸಲಾಗಿದೆ. ಐದುನೂರು ಮನೆಗಳಿಗೂ ಕಡಿಮೆ ಇರುವ ಗ್ರಾಮಗಳಲ್ಲಿ ಗೃಹನಿರ್ಮಾಣಮಾಡುವಾಗ 'ಆಯ' (ಅಳತೆ)ವನ್ನು ಗೊತ್ತು ಮಾಡಿಯೇ ಮನೆಯನ್ನು ಕಟ್ಟುವ ಪದ್ಧತಿಯು ಇದೆ. ಆದರೆ ಈಚೆಗೆ ಪಟ್ಟಣಗಳು ಬೆಳೆಯುತ್ತಾಬಂದಂತೆಲ್ಲ ಇರುವ ಜಾಗಗಳಲ್ಲೆಲ್ಲ ಮನೆಯನ್ನು ಅಲ್ಲಲ್ಲಿಯೇ ಸನ್ನಿವೇಶಕ್ಕೆ ತಕ್ಕಂತೆ ಕಟ್ಟಿಬಿಡುತ್ತಾರೆ. ಈ ಸಂದರ್ಭ ದಲ್ಲೆಲ್ಲ ಶಾಸ್ತ್ರವು ಗೌಣವೇ ಆಗಿದ್ದು ಲೌಕಿಕಪರಿಸ್ಥಿತಿಗಳೇ ಪ್ರಾಮುಖ್ಯವಾಗಿರು ತ್ತವೆ. ಇರಲಿ ಅಂತೂ ಮನೆಯನ್ನು ಕಟ್ಟಿದಮೇಲಾದರೂ ಶಾಸ್ತ್ರಕ್ಕೆ ಅನುಗುಣ ವಾಗಿ ಗೃಹಪ್ರವೇಶವನ್ನು ಮಾಡುವ ಪದ್ಧತಿಯು ಇನ್ನೂ ಜಾರಿಯಲ್ಲಿದೆ. ಆದ್ದರಿಂದ ಗೃಹಪ್ರವೇಶಕಾಲದಲ್ಲಿ ನಡೆಯಿಸುವ ಕರ್ಮಗಳ ಅರ್ಥವನ್ನು ವಿಚಾರಿಸುವದರಿಂದ ಲಾಭವುಂಟು.

ಗೃಹನಿರ್ಮಾಣದಲ್ಲಿ ಸ್ತಂಭ, ದ್ವಾರಗಳ ಪ್ರತಿಷ್ಠೆಯೂ ಮುಖ್ಯವಾದವು ಗಳು. ಸ್ತಂಭ (ಕಂಬ)ಗಳು ಗೃಹಕ್ಕೆ ಆಧಾರವಾದವುಗಳು. ವೇದದಲ್ಲಿ 'ಧರ್ಮಸ್ತೇ ಸ್ಥೂಣಾ ರಾಜಃ ಶ್ರೀಸ್ತೇ ಸ್ತೂಪಃ' ಎಂದು ಸ್ತುತಿಮಾಡಿ ಮಧ್ಯದ ಕಂಬವನ್ನು ಸ್ಥಾಪಿಸಬೇಕೆಂದು ಹೇಳಿದೆ. ಧರ್ಮವೆಂಬುದೇ ಮುಖ್ಯಕಂಬವು. ಕಂಬದ ಆಧಾರದಿಂದ ಮನೆಯು ನಿಂತಿರುವಂತೆ ಧರ್ಮದ ಆಧಾರದಿಂದಲೇ ನಮ್ಮ ಜೀವನವು ನಿಂತಿದೆ ಎಂದು ಇಲ್ಲಿ ತಿಳಿಸಿದೆ ಮತ್ತು ಕಟ್ಟಡ

(ಸೂಕ್ತ)ವೆಂಬುದು ಶ್ರೀಃ ಎಂದರೆ ಲಕ್ಷ್ಮಿಯೇ - ಎಂದು ಹೊಗಳಿದೆ. ಹೀಗೆ ಧರ್ಮದ ಆಧಾರದಿಂದ ಪ್ರಾಪ್ತವಾದ ಲಕ್ಷ್ಮಿಯಿಂದ ಗೃಹವು ನಿರ್ಮಿತವಾದಲ್ಲಿ ಆ ಮನೆಯು ಸುಖಕರವಾಗಿಯೇ ಇರುವದರಲ್ಲಿ ಸಂಶಯವೇ ಇಲ್ಲ. ಹಾಗೆಯೇ ದ್ವಾರದೇವತೆಗಳನ್ನೂ ಪೂಜಿಸಿ ಅವರ ಸಾನ್ನಿಧ್ಯವನ್ನು ಪ್ರಾರ್ಥಿಸಿ ದ್ವಾರ ಪ್ರತಿಷ್ಠೆಯನ್ನು ಮಾಡಬೇಕು. ಅನಂತರ ಗೃಹನಿರ್ಮಾಣವು ಮುಂದುವರೆಯ ಬೇಕು. ಎಲ್ಲಾ ರೀತಿಯಿಂದಲೂ ಗೃಹವು ಸಂಪೂರ್ಣವಾಗಿ ನಿರ್ಮಾಣವಾಗಿ ವಾಸಕ್ಕೆ ಸಜ್ಜಾದ ಅನಂತರ ಪ್ರವೇಶಾಂಗವಾದ ವಾಸ್ತುಪೂಜಾಹೋಮಾದಿಗಳು ನಡೆಯಬೇಕು. ಅವುಗಳನ್ನು ಈಗ ವಿಚಾರಮಾಡೋಣ.

## 13. ಪಿತೇವ ಪುತ್ರಾನ್ ಪ್ರತಿ ನೋ ಜುಷಸ್ವ

ಗೃಹಪ್ರವೇಶಕರ್ಮದಲ್ಲಿ ವಾಸ್ತೋಷ್ಪತಿಯೇ ಪ್ರಧಾನದೇವತೆಯು. ವಾಸ್ತೋಷ್ಪತಿ ಎಂದರೆ ದೇವೇಂದ್ರನು. ಈತನು ತ್ರೈಲೋಕ್ಯಾಧಿಪತಿಯು. ಅಪರಿಮಿತ ಐಶ್ವರ್ಯಸಂಪನ್ನನು. ನಿತ್ಯಯುವಕನು. ಶಚೀಪತಿಯು. ಇಂದ್ರ ಎಂಬ ಪದವೇ ''ಇದಿ ಪರಮೈಶ್ವರ್ಯೇ'' ಎಂಬ ಧಾತುವಿನಿಂದ ಹುಟ್ಟಿರು ವದು. ವೇದದಲ್ಲಿ ಇಂದ್ರನ ಮಹಿಮೆಯನ್ನು ಬಹಳವಾಗಿ ಕೊಂಡಾಡಿರುತ್ತದೆ. ಉಪನಿಷತ್ತುಗಳಲ್ಲಿ ಇಂದ್ರನೆಂದರೆ ಸಾಕ್ಷಾದ್ ಭಗವಂತನೇ-ಎಂದೂ ಅರ್ಥ ಮಾಡಲಾಗಿದೆ. ''ಶತಕ್ರತು''ವೆಂದೂ ಈತನಿಗೆ ಮತ್ತೊಂದು ಹೆಸರು ಉಂಟು. ಒಂದುನೂರು ಅಶ್ವಮೇಧಯಜ್ಞಗಳನ್ನು ಮಾಡಿದವನಿಗೆ ಇಂಥ ಪದವಿಯು ದೊರಕುವದೆಂದು ಶಾಸ್ತ್ರದಲ್ಲಿ ಹೇಳಿದೆ. ಆದ್ದರಿಂದಲೇ ಈ ಹೆಸರು ಆತನಿಗೆ ಅನ್ವರ್ಥವು. ಹೀಗೆ ಇಡಿಯ ಭೂಮಿ, ಪಾತಾಳ, ಸ್ವರ್ಗಗಳೆಂಬ ಮೂರು ಲೋಕಗಳಿಗೂ ಪ್ರಭುವಾದ ದೇವೇಂದ್ರನಿಗೆ ಈ ಭೂಮ್ಯಾಕಾಶಗಳೆಲ್ಲದರ ಪೂರ್ಣಒಡೆತನವಿರುತ್ತದೆ. ಆದ್ದರಿಂದ ನಮ್ಮ ಗೃಹ, ಪಟ್ಟಣ, ರಾಷ್ಟ್ರಗಳೆಲ್ಲ ಇಂದ್ರನದೇ ಸ್ವತ್ತಾಗಿವೆ. ಆತನೇ ತನ್ನ ಅನುಚರರಾದ ದೇವತೆಗಳೊಡನೆ ಈ ಭೂಲೋಕವನ್ನು ಕಾಪಾಡುತ್ತಿರುವನು. ಹೇಗೆಂದರೆ : ಸೂರ್ಯನು ಶಾಖವನ್ನು ಕೊಡುವನು. ವರುಣನು ಜಲಸಮೃದ್ಧಿಯನ್ನು ಉಂಟುಮಾಡುವನು.

ಪರ್ಜನ್ಯನು ಮಳೆಗರೆಯುವನು. ಓಷಧಿವನಸ್ಪತಿಗಳಿಗೆ ಅಧಿಪತಿಯಾದ ಚಂದ್ರನು ಸಸ್ಯಗಳು ಬೆಳೆಯುವಂತೆ ಮಾಡುವನು. ಬೃಹಸ್ಪತಿಯು ಆಚಾರ್ಯ ನಾಗಿದ್ದು ವಿದ್ಯಾಬುದ್ಧಿಗಳನ್ನು ಉಂಟುಮಾಡುವನು. ಅಗ್ನಿಯು ಪ್ರತ್ಯಕ್ಷದೇವತೆ ಯಾಗಿದ್ದು ಮನುಷ್ಯನ ಜೀವನವನ್ನೇ ಕಾಪಾಡುತ್ತಾ ದೇವತೆಗಳಿಗೂ ನಮಗೂ ಮಧ್ಯಸ್ತನಾಗಿ ಕಾರ್ಯವನ್ನು ನಿರ್ವಹಿಸುವನು. ಇವರೆಲ್ಲರೂ ದೇವೇಂದ್ರನ ಅಧೀನರು. ಆತನ ರಾಜ್ಯದ ಮಂತ್ರಿಗಳು. ಹೀಗೆಯೇ ಇನ್ನೂ ಅನೇಕದೇವತೆ ಗಳಿರುವರು. ಅವರೆಲ್ಲರ ಅನುಗ್ರಹದಿಂದ ನಮ್ಮ ಬಾಳು ಸಾಗುತ್ತಿರುವದು. ಅಂಥ ದೇವತೆಗಳಿಗೂ ದೇವನಾದ ಇಂದ್ರನು ವಾಸ್ತೋಷ್ಪತಿಯೆನಿಸಿ ಎಲ್ಲಾ ವಸ್ತುಗಳ ಲ್ಲಿಯೂ ತನ್ನ ಮಹಿಮೆಯಿಂದ ವ್ಯಾಪಿಸಿಕೊಂಡಿರುವನು. ಈ ಇಂದ್ರ ದೇವತೆಯೇ ಗೃಹಾಭಿಮಾನಿಯಾಗಿರುವದರಿಂದ ಈತನ ಪ್ರಸಾದವು ಬಹು ಮುಖ್ಯವಾದುದು. ಈತನು ಯಾವಾಗಲೂ ನಮ್ಮಗಳ ಗೃಹದಲ್ಲಿ ವಾಸಿಸುತ್ತಿದ್ದು 'ಅಸ್ತು' (ಆಗಲಿ) ಎಂದು ಹರಸುತ್ತಿರುವನು. ಆದ್ದರಿಂದ ನಾವು ಮನೆಯಲ್ಲಿ ಮಾತನಾಡುವಾಗ, ಕೆಲಸಮಾಡುವಾಗ ಎಚ್ಚರಿಕೆಯಿಂದಿರಬೇಕು. ಏಕೆಂದರೆ ವಾಸ್ತುಪುರುಷನು ಎಲ್ಲಕ್ಕೂ 'ಅಸ್ತು' ಎನ್ನುತ್ತಾನಾದ್ದರಿಂದ ಕೆಟ್ಟಮಾತನ್ನಾಡಿದರೆ ಅದೇ ಆಗಲಿ! ಎನ್ನುವನು. ಹಾಗೆಯೇ ಕೆಟ್ಟಕೆಲಸವನ್ನು ಮಾಡಿದರೂ ಅದೇ ನಡೆಯಲಿ! ಎನ್ನುವನು. ಆದ್ದರಿಂದ ಮನೆಯಲ್ಲಿ ಮಾಡಬಾರದಂಥ ದುಷ್ಕೃತ್ಯಗಳನ್ನು ಎಂದಿಗೂ ಕೈಗೊಳ್ಳಬಾರದು, ಕೆಟ್ಟಮಾತುಗಳು, ಬೈಗಳ, ಜಗಳ ಇವುಗಳನ್ನು ದೂರ ಇರಿಸಬೇಕು ಮತ್ತು ದುಷ್ಕರ್ಮಗಳನ್ನು ತ್ಯಾಗ ಮಾಡಬೇಕು. ಇರಲಿ, ಹೀಗೆ ವಾಸ್ತುಪುರುಷನ ಅಸ್ತಿತ್ವವನ್ನು ಮನಸ್ಸಿಗೆ ತಂದು ಕೊಂಡಲ್ಲಿ ನಾವು ಗೃಹವನ್ನು ಹೇಗೆ ಇಟ್ಟುಕೊಳ್ಳಬೇಕು ? ಗೃಹದಲ್ಲಿರುವಾಗ ನಾವು ಹೇಗಿರಬೇಕು ? ಎಂಬುದು ತಾನೇ ತಿಳಿಯುತ್ತದೆ.

ಈಗ ವಾಸ್ತೋಷ್ಪತಿಯ ಆರಾಧನೆ, ಆತನನ್ನು ಸಂತೋಷಗೊಳಿಸುವಿಕೆ- ಇವುಗಳನ್ನು ವಿಚಾರಮಾಡೋಣ. ಆತನು ತ್ರೈಲೋಕ್ಯಾಧಿಪತಿಯೂ ದೇವತೆ ಗಳೊಡೆಯನೂ ಆದ್ದರಿಂದ ಆತನನ್ನು ನಾವು ಕರೆಯುವಾಗ ಪರಿವಾರ

ದೊಡನೆಯೇ ಕರೆಯಬೇಕು ಮತ್ತು ಅವನನ್ನು ಗೌರವಿಸಲು ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ದೇವತೆಗಳಿಗೆ ಶರೀರವು ಉಂಟು. ಆದರೆ ನಮಗೆ ಇರುವಂಥ ಪ್ರಾಕೃತಶರೀರವಲ್ಲ. ಅವರು ಸೂಕ್ಷ್ಮಶರೀರವುಳ್ಳವರು. ಮತ್ತು ಅಡ್ಡಿ ಆತಂಕಗಳಿಲ್ಲದವರು. ಯಾವಾಗ ಯಾವ ವೇಷವನ್ನಾದರೂ ಧರಿಸಬಲ್ಲರು ಅಲ್ಲದೆ ಅವರಿಗೆ ಅಣಿಮಾದಿಸಿದ್ಧಿಗಳಿರುವವು. ಆದ್ದರಿಂದ ಅವರು ಕಣ್ಣಿಗೆ ಕಾಣಿಸದಷ್ಟು ಸೂಕ್ಷ್ಮರಾಗಬಲ್ಲರು. ದೊಡ್ಡವರೂ ಆಗಬಲ್ಲರು, ಭಾರವಾಗ ಬಲ್ಲರು, ಹಗುರವಾಗಬಲ್ಲರು-ಇತ್ಯಾದಿ. ಹೀಗಿರುವದರಿಂದ ನಾವು ಪೂಜಿಸಿ ಗೌರವಿಸುವದಾದರೆ ಭಾವನೆಯಿಂದ ಅವರನ್ನು ಬರಮಾಡಿಕೊಳ್ಳಬೇಕು. ಭಾವನೆಯನ್ನೇ ಶ್ರದ್ಧೆಯೆಂದೂ ಕರೆಯುತ್ತಾರೆ. 'ಶ್ರದ್ಧಾ ಮಯೋಽಯಂ ಪುರುಷಃ' - ಎಂದು ಗೀತೆಯಲ್ಲಿ ಹೇಳಿಯೂ ಇದೆ. ಹೀಗೆ ಭಾವನಾಪ್ರಧಾನ ವಾಗಿರುವ ದೇವತಾಕಾರ್ಯಗಳಲ್ಲಿ ಆಯಾ ದೇವತೆಗಳನ್ನು ಹೇಗೆ, ಎಲ್ಲಿ, ಯಾವರೂಪದಿಂದ ಕರೆಯಬೇಕು ? ಹೇಗೆ ಪೂಜಿಸಬೇಕು ? ಎಂಬೀ ವಿಷಯಗಳಿಗೆ ಶಾಸ್ತ್ರವೇ ಪ್ರಮಾಣವು. ದೇವತೆಗಳೆಲ್ಲರೂ ಮಂತ್ರಾಧೀನರು. ಮಂತ್ರವು ಬ್ರಾಹ್ಮಣರ ಅಧೀನವು. ಆದ್ದರಿಂದ ಮಂತ್ರಜ್ಞರಾದ ಬ್ರಾಹ್ಮಣರು ದೇವತೆಗಳ ಆರಾಧನೆಗೂ ಅವರ ಉಪಚಾರಗಳಿಗೂ ಮುಖ್ಯವಾದ ಅಧಿಕಾರಿ ಗಳಾಗಿರುತ್ತಾರೆ. ಬ್ರಾಹ್ಮಣನಿಗೆ ಇದೇ ವೃತ್ತಿಯಾಗಿರುತ್ತದೆ. ಇರಲಿ, ಈಗ ದೇವತೆಗಳನ್ನು ಎಲ್ಲಿ ಕರೆಯಬೇಕೆಂಬುದನ್ನು ವಿಚಾರಿಸೋಣ.

ಸರ್ವವ್ಯಾಪಕರಾದ ದೇವತೆಗಳನ್ನು ಕರೆಯುವದಾದರೆ ಎಲ್ಲಿಗೆ ? ಎಂದು ಯಾರಾದರೂ ಕೇಳಬಹುದು. ಇದು ನಿಜ. ದೇವತೆಗಳನ್ನು ಅವರು ಇರುವ ಸ್ವರೂಪದಿಂದಲೇ ನಾವು ಕರೆಯುವದಾಗಲಿ ಆರಾಧನೆಮಾಡುವದಾಗಲಿ ಸಾಧ್ಯವಿಲ್ಲ. ಇದಕ್ಕೆ ಲೌಕಿಕವಾಗಿಯೂ ಒಂದು ಉದಾಹರಣೆಯನ್ನು ಕೊಡ ಬಹುದು. ನಮ್ಮ ರಾಷ್ಟ್ರ ಮತ್ತು ರಾಷ್ಟ್ರಪತಿಗಳನ್ನು ಸ್ವಾತಂತ್ರ್ಯದಿನಾಚರಣೆ ಯಂದು ಗೌರವಿಸಬೇಕೆಂದಿಟ್ಟುಕೊಳ್ಳೋಣ. ಆ ದಿನ ಎಲ್ಲ ಸ್ಥಳಗಳಿಗೂ ರಾಷ್ಟ್ರಪತಿಗಳು ಬರಲು ಸಾಧ್ಯವೆ ? ಇಲ್ಲ. ಆದ್ದರಿಂದ ನಾವು ರಾಷ್ಟ್ರದ ಪರವಾಗಿ

ಒಂದು ಧ್ವಜವನ್ನೂ ರಾಷ್ಟ್ರಪತಿಗಳ ಒಂದು ಭಾವಚಿತ್ರವನ್ನೂ ಇಟ್ಟು ಅವುಗಳಿಗೇ ನಮ್ಮ ಗೌರವವನ್ನು ಸಲ್ಲಿಸುತ್ತೇವೆ. ಅದು ರಾಷ್ಟ್ರಕ್ಕೂ ಆದರ ಯಜಮಾನನಿಗೂ ಸಂದ ಗೌರವವೇ-ಎಂದು ನಮ್ಮ ಭಾವನೆ. ಹಾಗೆಯೇ ದೇವತೆಗಳನ್ನು ಒಂದಾನೊಂದು ಪ್ರತೀಕ ಎಂದರೆ ಉಪಾಧಿಯಲ್ಲಿ ಕರೆದು ಆವಾಹಿಸಿ ಪೂಜಿಸುವ ಪದ್ಧತಿಯಿದೆ. ಬಹಳ ಮಟ್ಟಿಗೆ ಇಂಥ ವಸ್ತುಗಳು ನೈಸರ್ಗಿಕವಾಗಿದ್ದು ಹೆಚ್ಚು ದೊಡ್ಡದಾಗಿರಬೇಕು. ಅಂಥಲ್ಲಿಯೇ ದೇವತೆಗಳು ಸನ್ನಿಹಿತರಾಗುವರು. ಆದ್ದರಿಂದ ದೇವತೆಗಳು ಯಾರೇ ಇರಲಿ - ಅವರನ್ನು ಜಲ, ಸ್ಥಲ, ಧಾನ್ಯ - ಮುಂತಾದ ಉಪಾಧಿಗಳಲ್ಲಿ ಕರೆಯುತ್ತಾರೆ. ಜಲವನ್ನು ಒಂದು ಪಾತ್ರೆಯಲ್ಲಿ ತುಂಬಿರುತ್ತಾರೆ. ಅದನ್ನೇ ಕಲಶ ಅಥವಾ ಪೂರ್ಣಕುಂಭವೆಂದು ಕರೆಯುತ್ತಾರೆ. ಯಾವಯಾವ ಕರ್ಮಕ್ಕೆ ಎಷ್ಟೆಷ್ಟು ದೇವತೆಗಳನ್ನು ಕರೆಯಬೇಕೋ ಆಯಾ ಸಂಖ್ಯೆಗೆ ತಕ್ಕಂತೆ ಕಲಶಗಳನ್ನು ಇಡುತ್ತಾರೆ. ಅವುಗಳನ್ನೇ ದೇವತೆಗಳೆಂದು ಭಾವಿಸುವದರಿಂದ ಅವನ್ನು ಹೊಸಬಟ್ಟೆಗಳು, ಪೂರ್ಣಫಲಗಳು, ಗಿಡಗಳ ಚಿಗುರೆಲೆಗಳು, ಮೃತ್ತಿಕೆಗಳು, ಸುವರ್ಣಾದಿಗಳು, ಗಂಧ, ಹೂವು, ದರ್ಭೆಯ ಕೂರ್ಚಗಳು, ಜನಿವಾರ ಇತ್ಯಾದಿಗಳಿಂದ ಅಲಂಕರಿಸುವರು. ಅವುಗಳನ್ನು ಇಡುವ ಸ್ಥಳವನ್ನು ಮಂಟಪ-ರಂಗವಲ್ಯಾದಿಗಳಿಂದ ಅಲಂಕರಿಸಿ ಧೂಪದೀಪ ಗಳಿಂದ ಬೆಳಗಿ ಧಾನ್ಯಗಳನ್ನು ಹರಡಿ ಸ್ಥಾಪಿಸುವದು ಪದ್ಧತಿ. ಕೆಲವು ದೇವತೆಗಳನ್ನು ಧಾನ್ಯ, ಬೆಲ್ಲ, ತರಕಾರಿ-ಮುಂತಾದ ದ್ರವ್ಯಗಳಲ್ಲಿಯೂ ಆವಾಹಿಸಿ ಪೂಜಿಸುತ್ತಾರೆ. ಇವೆಲ್ಲವೂ ದೇವತೆಗಳನ್ನು ಸಂತೋಷ ಗೊಳಿಸುವದಕ್ಕಾಗಿ ಎಂದು ಭಾವಿಸಬೇಕು. ಈ ಸಾಮಾಗ್ರಿಗಳು ಉತ್ತಮವಾದ ವಾಗಿರಬೇಕು ಮತ್ತು ಯಜಮಾನನ ಅನುಕೂಲಕ್ಕೆ ತಕ್ಕಂತೆ ಇರಬೇಕು. ಯಜಮಾನನೂ ಈ ವಿಷಯದಲ್ಲಿ ಜಿಪುಣತನವನ್ನು ತೋರಿಸಬಾರದು. 'ವಿತ್ತಶಾಠ್ಯಂ ನ ಕಾರಯೇತ್' ಎಂಬ ಎಚ್ಚರಿಕೆಯನ್ನೂ ಶಾಸ್ತ್ರವು ನೀಡಿದೆ. ಆದರೆ ಬಡವನಿಗೂ ಶಾಸ್ತ್ರವು ಸೌಕರ್ಯವನ್ನು ಕಲ್ಪಿಸಿ ಅವನ ಯೋಗ್ಯತೆಗೆ ತಕ್ಕಂತೆ ಸಂಕೋಚವನ್ನು ಮಾಡಲು ಅವಕಾಶವನ್ನು ನೀಡಲಾಗಿದೆ. ಹೀಗೆ ಸ್ಥಾಪಿಸಿದ

ಕಲಶಗಳಲ್ಲಿ ಯಜಮಾನನೇ ಪತ್ನೀಸಹಿತನಾಗಿ ಕುಳಿತು ಶ್ರದ್ಧೆಯಿಂದ ದೇವತೆಗಳನ್ನು ಕರೆಯಬೇಕು. ಮುಖ್ಯದೇವತೆಗೆ ಪ್ರಮುಖವಾದ ಸ್ಥಾನ, ಮರ್ಯಾದೆಗಳಿರಬೇಕು. ಅಂಥ ದೇವತೆಯನ್ನು ಆವಾಹಿಸುವ ಕಲಶವನ್ನು ಪ್ರಧಾನಕಲಶವೆನ್ನುವರು. ಕೆಲವು ವೇಳೆ ಯಜಮಾನನಿಗೆ ಸಾಕಷ್ಟು ತಿಳಿವಳಿಕೆ ಇಲ್ಲದಿದ್ದರೆ ಆತನ ಪರವಾಗಿ ಪುರೋಹಿತರೂ ಋತ್ವಿಜರೂ ಈ ಕಾರ್ಯವನ್ನು ಕೈಗೊಳ್ಳುತ್ತಾರೆ. ಆದರೆ ಅವರುಗಳೂ ಮಂತ್ರತಂತ್ರಗಳಲ್ಲಿ ಅನಭಿಜ್ಞರಾಗಿರಬಾರದು. ಆದ್ದರಿಂದ ಮಂತ್ರತಂತ್ರಜ್ಞರಾದ ಅನುಭವಿಗಳಾದ ಗುರುಗಳನ್ನೇ ಆಚಾರ್ಯರನ್ನಾಗಿ ಯಜಮಾನನು ಆರಿಸಿಕೊಳ್ಳಬೇಕು. ದೇವೇಂದ್ರನಿಗೆ ಬೃಹಸ್ಪತಿಗಳಿದ್ದಂತೆಯೇ ಇಲ್ಲಿಯೂ ಪ್ರಧಾನಾಚಾರ್ಯರು ಯಜಮಾನನ ಪರವಾಗಿ ಇರುತ್ತಾರೆ. ಆಚಾರ್ಯರು ತಮ್ಮ ಕರ್ಮಕ್ಕೆ ಸಹಾಯಕರನ್ನಾಗಿ ಋತ್ವಿಜರನ್ನು ವರಣ(ಆರಿಸಿಕೊಳ್ಳುವದು) ಮಾಡಿಕೊಳ್ಳುತ್ತಾರೆ. ಅನಂತರ ಅನುಷ್ಠಾನಗಳು ಆರಂಭವಾಗುವವು.

ಪ್ರಾರಂಭದಲ್ಲಿ ಗಣಪತಿಪೂಜೆ, ಸ್ವಸ್ತಿವಾಚನಾದಿಗಳು ನೆರವೇರಿದ ನಂತರ ವಾಸ್ತುದೇವತೆಯ ಆವಾಹನಾದಿಗಳಾಗುವವು. ಅದಕ್ಕೆ ಮುಂಚೆ ಹೊಸ ಗೃಹವನ್ನು ಕಟ್ಟುವಾಗ ಆ ಜಾಗದಲ್ಲಿ ವಾಸಿಸುತ್ತಾ ಇದ್ದಿರಬಹುದಾದ ಭೂತಪ್ರೇತ ಪಿಶಾಚಿಗಳನ್ನು ಅಲ್ಲಿಂದ ಹೊರಕ್ಕೆ ಕಳುಹಿಸುವ ಕಾರ್ಯವು ನಡೆಯುತ್ತದೆ. ನಾವು ಯಾವ ಕಾರ್ಯವನ್ನು ಮಾಡಿದರೂ ಯಾರಿಗೂ ತೊಂದರೆಯಾಗಬಾರದು. ಆದ್ದರಿಂದ ಮೊದಲು ಸ್ಥಳವನ್ನು ಖಾಲಿಮಾಡಿಸಿಯೇ ನಾವು ಕಾರ್ಯಾರಂಭವನ್ನು ಮಾಡಬೇಕು. ಇದು ಪದ್ಧತಿಯಾಗಿದೆ. ಅನಂತರ ಗ್ರಹ ದೇವತೆಗಳ ಆರಾಧನಾಪುರಸ್ಸರವಾಗಿ ವಾಸ್ತುದೇವತೆಯನ್ನು ಪರಿವಾರಸಮೇತವಾಗಿ ಕರೆಯುವಾಗ 'ಮಂಡಲ'ವನ್ನು ರಚಿಸುತ್ತಾರೆ. ಮಂಡಲವನ್ನು ರಂಗವಲ್ಲಿ ಅಥವಾ ಹಿಟ್ಟಿನಿಂದ ಬರೆಯುತ್ತಾರೆ. ಅದಕ್ಕಾಗಿಯೇ ವಿಶಿಷ್ಟವಾದ ನಕಾಶೆ (ಡ್ರಾಯಿಂಗ್)ಯುಂಟು. ಕೆಲವು ವೇಳೆ ಈ ನಕಾಶೆಯನ್ನು ಬೀಜಾಕ್ಷರಗಳ ಸಮೇತ ತಾಮ್ರದ ತಗಡಿನಲ್ಲಿ ಬರೆದು ಮನೆಯಲ್ಲಿ ನೆಲದೊಳಗೆ ಸ್ಥಾಪಿಸುವದೂ

ಉಂಟು. ವೈದಿಕಸಂಪ್ರದಾಯದಲ್ಲಿ ಮಂಡಲ ರಚನೆಯನ್ನು ಈ ಸಂದರ್ಭದಲ್ಲಿ ಮಾಡಿ ಮಂಡಲದೇವತೆಗಳನ್ನೆಲ್ಲ ಪೂಜಿಸಿ ವಾಸ್ತುಪುರುಷನನ್ನು ಆರಾಧಿಸುವ ಪದ್ಧತಿಯಿದೆ. ಹೀಗೆ ಮಂತ್ರ, ತಂತ್ರ ಉಪಚಾರಗಳಿಂದ ವಾಸ್ತೋಷ್ಪತಿಯ ಆರಾಧನೆಯು ನಡೆಯುತ್ತದೆ. ವಾಸ್ತೋಷ್ಪತಿಯನ್ನು ಗೊತ್ತಾಗಿ ಸ್ತುತಿಸುತ್ತಿರುವ ನಾಲ್ಕು ವೇದಮಂತ್ರಗಳು ಸುಪ್ರಸಿದ್ಧವಾಗಿವೆ. ಅವುಗಳ ಅರ್ಥವೂ ಬಹಳ ಚೆನ್ನಾಗಿದೆ. 'ನಮ್ಮ ಮನೆಯಲ್ಲಿನ ಎರಡುಕಾಲಿನ ಮತ್ತು ನಾಲ್ಕುಕಾಲಿನ ಎಲ್ಲಾ ಪ್ರಾಣಿಗಳಿಗೂ ಎಲೈ ವಾಸ್ತೋಷ್ಪತಿಯೆ, ಸುಖವನ್ನುಂಟುಮಾಡುವವನಾಗು; ಕ್ಷೇಮವನ್ನೂ ಸ್ವಸ್ತಿಯನ್ನೂ ಉಂಟುಮಾಡುವವನಾಗು' ಎಂದು ಅದರಲ್ಲಿ ಪ್ರಾರ್ಥಿಸಿದೆ. ಹೀಗೆ ಪ್ರಧಾನದೇವತೆಯನ್ನು ಪೂಜಿಸಿದ ಅನಂತರ ಉಳಿದ ದೇವತೆಗಳನ್ನೂ ಪೂಜಿಸಲಾಗುವದು. ವಾಸ್ತುಮಂಡಲದಲ್ಲಿ ಒಟ್ಟು ದಿಕ್ಪಾಲಕರೂ ಸೇರಿದಂತೆ **62** ದೇವತೆಗಳಿರುವರು. ಅವರಲ್ಲಿ ಕೆಲವರ ಹೆಸರನ್ನು ಕೇಳಿರಿ; ಶಿಖಿ ಎಂಬವನು ಮೊದಲನೆಯವನು ; ಅರಸು, ಪಾಪ, ರೋಗ, ಭಲ್ಲಾಟ, ರಾಜಯಕ್ಷ್ಮ, ಅಪವತ್ಸ ಮುಂತಾದವರು ಮತ್ತೆ ಕೆಲವರು ; ಹೀಗೆ ಮಂಡಲ ದೇವತೆಗಳನ್ನೂ ಪರಿವಾರದೇವತೆಗಳನ್ನೂ ಪೂಜಿಸಿದ ಅನಂತರ ಅವರುಗಳನ್ನು ಹೋಮಗಳಿಂದ ತೃಪ್ತಿಪಡಿಸಲಾಗುವುದು.

ಈಗ ಹೋಮದ ವಿಷಯವನ್ನು ವಿಚಾರಮಾಡೋಣ. ದೇವತೆಗಳಿಗೆ ತೃಪ್ತಿಯುಂಟಾಗಬೇಕಾದರೆ ಅಗ್ನಿಯ ಮೂಲಕ ನಾವು ಸಮರ್ಪಿಸುವ ದ್ರವ್ಯ ಗಳಿಂದ ಮಾತ್ರ ಸಾಧ್ಯ-ಎಂದು ಸನಾತನಧರ್ಮದವರು ನಂಬುತ್ತಾರೆ. ಇದಕ್ಕೆ ಯಜ್ಞವೆಂದು ಕರೆಯುವರು. ನಾವು ಆಯಾ ದೇವತೆಗಳ ಹೆಸರನ್ನು ಉಚ್ಚಾರ ಮಾಡಿ 'ಸ್ವಾಹಾ' ಎಂದು ಹೇಳಿ ಅಗ್ನಿಯಲ್ಲಿ ದ್ರವ್ಯವನ್ನು ಸಮರ್ಪಿಸಿದರೆ ಅದು ದೇವತೆಗಳಿಗೆ ತಲುಪುವದು. ಹೇಗೆ ನಾವು ನಮ್ಮ ನೆಂಟರಿಗೊ ಸ್ನೇಹಿತರಿಗೊ, ಒಂದು ಪತ್ರವನ್ನೊ-ಅಥವಾ ಹಣವನ್ನೊ-ಕಳುಹಿಸಬೇಕಾದರೆ ಅಂಚೆಯ ಕಛೇರಿಯಲ್ಲಿ ದೊರಕುವ ಕಾಗದದಲ್ಲಿ ಬರೆದು ಅಥವಾ ಫಾರಂ ತುಂಬಿ ಹಣವನ್ನು ಕಟ್ಟಿದರೆ ದೂರದಲ್ಲಿರುವ ನಮ್ಮವರಿಗೆ ತಲುಪುವದೋ ಹಾಗೆ-

ಎಂದು ತಿಳಿಯಬೇಕು. ಅಂಚೆ ವ್ಯವಸ್ಥೆ ಇರುವದೇ ಈ ವ್ಯವಹಾರಕ್ಕಾಗಿಯಲ್ಲವೆ? ಇದನ್ನು ಯಾರೊಬ್ಬರೂ ಸಂಶಯಪಡುವದಿಲ್ಲ. 'ಅಯ್ಯೋ, ಅನ್ಯಾಯವಾಗಿ ನನ್ನ ಹಣವನ್ನೆಲ್ಲ ಅಂಚೆ ಅಧಿಕಾರಿಗಳಿಗೆ ಒಪ್ಪಿಸಿಬಿಟ್ಟೆನಲ್ಲ' ಅದು ಹೋಯಿತಲ್ಲ-ಎಂದು ಯಾರು ಶೋಕಪಡುವುದಿಲ್ಲ. ಹಾಗೆಯೇ ಕರ್ಮಶ್ರದ್ಧೆಯುಳ್ಳವನು ಅಗ್ನಿಯಲ್ಲಿ ಅರ್ಪಿಸುವ ದ್ರವ್ಯವು ಸುಟ್ಟು ವ್ಯರ್ಥವಾಯಿತೆಂದು ಭಾವಿಸುವದಿಲ್ಲ, ಅದು ತಾನು ಉದ್ದೇಶಿಸಿರುವ ದೇವತೆಗೇ ಮುಟ್ಟುತ್ತದೆ-ಎಂದು ಭಾವಿಸುತ್ತಾನೆ ಮತ್ತು ಆ ದೇವತೆಯ ಅನುಗ್ರಹದಿಂದ ತನಗೆ ಒಂದಕ್ಕೆ ಹತ್ತಾಗಿ ಸಮೃದ್ಧಿಯುಂಟಾಗುವದೆಂದೂ ತಿಳಿಯುತ್ತಾನೆ. ಭೂಮಿಯಲ್ಲಿ ಬೀಜವನ್ನು ಬಿತ್ತುವ ರೈತನು ತನ್ನ ಕಾಳೆಲ್ಲ ಮಣ್ಣು ಪಾಲಾಯಿತಲ್ಲ, ಎಂದು ದುಃಖಪಡುವದಿಲ್ಲ. ಅದು ಪೈರಾಗಿ ತನ್ನ ಮನೆಯನ್ನು ತುಂಬಲಿದೆ-ಎಂಬ ನಂಬಿಕೆಯಿಂದಲೇ ಚೆಲ್ಲುತ್ತಾನೆ. ವ್ಯವಹಾರದಲ್ಲಿ ಹೀಗಿರುವಂತೆಯೇ ದೇವತೆಗಳ ಮಟ್ಟದಲ್ಲಿಯೂ ಈ ಕೊಟ್ಟುಪಡೆಯುವ ವ್ಯವಹಾರವು ಇದ್ದುಕೊಂಡೇ ಇರುವದು. ಭಗವದ್ಗೀತೆಯ ಈ ಪದ್ಯವನ್ನು ನೋಡಿರಿ :

**ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।**
**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥ 3-11**

'ನೀವು ದೇವತೆಗಳನ್ನು ಈ ಯಜ್ಞದಿಂದ ಆರಾಧಿಸಿರಿ, ಇದರಿಂದ ದೇವತೆಗಳು ನಿಮ್ಮನ್ನು ಪೋಷಿಸಲಿ ! ಹೀಗೆ ಅನ್ಯೋನ್ಯವಾದ ಸಹಕಾರದಿಂದ ಹೆಚ್ಚಿನ ಶ್ರೇಯಸ್ಸನ್ನು ಪಡೆಯಿರಿ !'-ಎಂದೇ ಭಗವಂತನು ಅಪ್ಪಣೆಮಾಡಿರುತ್ತಾನೆ. ದೇವತೆಗಳು ಏನನ್ನೂ ತಿನ್ನುವದಿಲ್ಲ, ಪದಾರ್ಥಗಳನ್ನು ನೋಡಿಯೇ ತೃಪ್ತಿಪಟ್ಟುಕೊಳ್ಳುವರು. ಆದ್ದರಿಂದಲೇ ದೇವತೆಗಳ ಮುಂದೆ ನಾವು ಪದಾರ್ಥಗಳನ್ನು ಇಟ್ಟು 'ನಿವೇದನ' ಮಾಡುವೆವು. ಅಷ್ಟರಿಂದಲೇ ಅವರಿಗೆ ತೃಪ್ತಿ. ಅದಕ್ಕಿಂತ ಹೆಚ್ಚಿನ ತೃಪ್ತಿಯಾಗಬೇಕಾದರೆ ಸಾತ್ತ್ವಿಕ ಜನರಿಗೆ ಕೊಟ್ಟು ಅಥವಾ ಭೋಜನ ಮಾಡಿಸಿ ತೃಪ್ತಿಗೊಳಿಸಬೇಕು. ಇವನ್ನು ದಾನ, ಧರ್ಮ, ಸಂತರ್ಪಣೆಗಳೆಂದೂ ಕರೆಯುವರು. ಒಟ್ಟಿನಲ್ಲಿ ಇವೆಲ್ಲವೂ ದೇವತೆಗಳನ್ನು ಸಂತೋಷಗೊಳಿಸುವ

ಮಾರ್ಗಗಳಾಗಿರುವವು. ಹೀಗಿರುವಲ್ಲಿ ಕೇವಲ ಲೌಕಿಕ ಬುದ್ಧಿಯನ್ನು ಉಪಯೋಗಿಸಿ 'ಬೆಂಕಿಯಲ್ಲಿ ಪದಾರ್ಥಗಳನ್ನು ಸುಡುವುದೇ ಯಜ್ಞವು, ಇದು ವ್ಯರ್ಥ'-ಎಂದು ಟೀಕೆಮಾಡಿದರೆ ಅಂಥವರು ಅಲ್ಪಬುದ್ಧಿಯವರೂ ದೇವತಾ ದ್ವೇಷಿಗಳೂ ಆಗಿರುತ್ತಾರೆಂದು ಧಾರಾಳವಾಗಿ ಹೇಳಬಹುದು. ಯಜ್ಞಯಾಗಾದಿ ಗಳು ಕಡಿಮೆಯಾದಾಗಲೇ ಹಾಗೂ ಜನರು ಜಿಪುಣತನ, ವಂಚನೆ, ಮೋಸ ಗಳಿಂದ ಇತರರನ್ನು ಹಿಂಸಿಸಿದಾಗಲೇ ಯುದ್ಧ ಕ್ಷಾಮ, ಡಾಮರ, ಬೆಂಕಿಯ ಅಪಘಾತಗಳು-ಸಂಭವಿಸಿ ಪ್ರಕೃತಿಯು ದೇವತೆಗಳ ಪಾಲನ್ನು ಸಮಮಾಡಿ ಬಿಡುತ್ತದೆ. ಆಗ ನಮ್ಮನ್ನು ಕಾಪಾಡಲು ಈ ನಾಸ್ತಿಕರು ನೆರವಾಗುತ್ತಾರೆಯೆ ? ಅಥವಾ ನಾವು ಈ ಲೋಕವನ್ನು ಬಿಟ್ಟಮೇಲೂ ಸುಖವಾಗಿರಬೇಕಾದರೆ ಇವರು ಏನಾದರೂ ಉಪಾಯಗಳನ್ನು ತಿಳಿಸಬಲ್ಲರೆ ? ಯೋಚಿಸಿರಿ.

ಪ್ರಕೃತವಿಚಾರಕ್ಕೆ ಬರೋಣ. ದೇವತೆಗಳ ತೃಪ್ತಿಗಾಗಿ ಮಾಡುವ ಹೋಮಗಳಲ್ಲಿ ದ್ರವ್ಯವು ಉತ್ತಮವಾದದ್ದಾಗಿರಬೇಕು. ವಿಧಿಪೂರ್ವಕವಾಗಿ ಸಮರ್ಪಿಸಲ್ಪಡಬೇಕು. ಆದ್ದರಿಂದ ಅಗ್ನಿಯನ್ನು ಪ್ರತಿಷ್ಠಾಪಿಸಿ ಪೂಜಿಸಿ ಆತನನ್ನು ಮೊದಲು ತೃಪ್ತಿಗೊಳಿಸಿ ಅನಂತರ ಅವನು ಚೆನ್ನಾಗಿ ಪ್ರತ್ಯಕ್ಷನಾದ ಮೇಲೆ (ಎಂದರೆ ಬೆಂಕಿಯು ಚೆನ್ನಾಗಿ ಉರಿಯುವಂತೆ ಆದಾಗ) ಆತನ ಜ್ವಾಲೆಗಳೆಂಬ ನಾಲಗೆಯಮೇಲೆ ಆಹುತಿಗಳನ್ನು ಕೊಡಬೇಕು. ಇಂಥ ಸಂದರ್ಭಗಳಲ್ಲಿ ನಾವು ಮೊದಲು ಪೂಜೆಮಾಡುವಾಗ ಯಾವಯಾವ ದೇವತೆಗಳನ್ನು ಕರೆದಿರುವೆವೋ ಆ ದೇವತೆಗಳಿಗೆಲ್ಲ ಮರೆಯದೆ ಆಹುತಿಗಳನ್ನು ಅರ್ಪಿಸಬೇಕು. ಪ್ರಧಾನ ದೇವತೆಗೆ ಸ್ವಲ್ಪ ಹೆಚ್ಚಾಗಿಯೇ ಆಹುತಿಗಳನ್ನು ಕೊಡಬೇಕು. ವೈದಿಕಕರ್ಮಗಳಲ್ಲಿ ಆಹುತಿ ಎಂದರೆ ಚರು(ಅನ್ನ, ಪಾಯಸಾದಿಗಳು), ಸಮಿತ್ತು (ಮರದ ಕಡ್ಡಿ), ಆಜ್ಯ (ತುಪ್ಪ) ಇವುಗಳನ್ನು ಮಾತ್ರವೇ ಅರ್ಪಿಸುತ್ತಾರೆ. ಇವಗಳಲ್ಲೆಲ್ಲ ತುಪ್ಪವೇ ಮುಖ್ಯ. 'ದೇವಾನಾಮಾಜ್ಯಮಾಹಾರಮ್' ಎಂದಂತೆ ದೇವತೆಗಳಿಗೆ ಇಷ್ಟವಾದ ಆಹಾರವು ತುಪ್ಪವೊಂದೇ. ಈ ಹೋಮದ ಹೊಗೆಯು ಆಯುಷ್ಯಾಭಿ ವೃದ್ಧಿಯನ್ನು ಉಂಟುಮಾಡುವದು. ಇಂಥ ಹೋಮಗಳಿಂದ ವಾಸ್ತೋಷ್ಪತಿ

ಯನ್ನು ಮುಖ್ಯವಾಗಿ ಸಂತೋಷಗೊಳಿಸುತ್ತಾರೆ. ಆತನೊಡನೆ ಆದಿತ್ಯಾದಿ ನವಗ್ರಹಗಳು, ಮಂಡಲದೇವತೆಗಳೇ ಮುಂತಾದ ಎಲ್ಲಾ ಆಹೂತದೇವತೆಗಳಿಗೂ ಹವಿಸ್ಸನ್ನು ಅರ್ಪಣೆಮಾಡಲಾಗುವುದು. ಅನಂತರ ಪೂರ್ಣಾಹುತಿಯನ್ನು ನೆರವೇರಿಸಲಾಗುತ್ತದೆ. ಪೂರ್ಣಾಹುತಿಯನ್ನರ್ಪಿಸುವ ವೇದಮಂತ್ರವು ಹೀಗಿದೆ:-

ಪೂರ್ಣಾಹುತಿಮುತ್ತಮಾಂ ಜುಹೋತಿ ।
ಸರ್ವಂ ವೈ ಪೂರ್ಣಾಹುತಿಃ ಸರ್ವಮೇವಾಪ್ನೋತಿ ।
ಅಥೋ ಇಯಂ ವೈ ಪೂರ್ಣಾಹುತಿಃ ।
ಅಸ್ಯಾಮೇವ ಪ್ರತಿತಿಷ್ಠತಿ ॥

ಉತ್ತಮವಾದ ಪೂರ್ಣಾಹುತಿಯನ್ನು ಯಜಮಾನನು ಈಗ ಅರ್ಪಿಸುತ್ತಿದ್ದಾನೆ. ಆ ಯಜಮಾನನ ಎಲ್ಲಾ (ಕಾಮಗಳೂ) ಪೂರ್ಣಾಹುತಿಯಲ್ಲಿ ಅಡಗಿವೆ. ಇದನ್ನು ಅರ್ಪಿಸುವದರಿಂದ ಆತನು ತನ್ನ ಇಷ್ಟಾರ್ಥಗಳನ್ನೆಲ್ಲ ಪಡೆದುಕೊಳ್ಳುತ್ತಾನೆ. ಈ ಪೂರ್ಣಾಹುತಿಯಲ್ಲಿಯೇ ಎಂದರೆ ಫಲದಲ್ಲಿಯೇ ಆತನು ನೆಲೆಗೊಳ್ಳುವನು ಎಂದು ಇದರ ಅಭಿಪ್ರಾಯ. ಇಂಥ ಸಂದರ್ಭದಲ್ಲಿ ಫಲ, ಪುಷ್ಪ, ಮಂಗಳದ್ರವ್ಯಗಳು, ಪೂರ್ಣಫಲ, ವಸ್ತ್ರಾದಿಗಳನ್ನೆಲ್ಲ ಯಜ್ಞೇಶ್ವರನಿಗೆ ಅರ್ಪಿಸುವ ವಾಡಿಕೆಯಿದೆ.

## 14. ಬಲಿಮಾಹರನ್ತಿ

ಹೀಗೆ ಹೋಮವು ಪೂರೈಸಿದ ಅನಂತರ ಗೃಹದ ಸುತ್ತಲೂ ಸೂತ್ರವೇಷ್ಟವನ್ನು ಮಾಡಿ ಬಲಿಪ್ರದಾನಮಾಡುವರು. ದಾರವನ್ನು ಸುತ್ತುವದರ ಉದ್ದೇಶವು ಗೃಹಕ್ಕೆ ದಿಗ್ಬಂಧನರೂಪವಾಗಿರುವದು. ಅನಂತರ ಎಂಟುದಿಕ್ಕುಗಳಲ್ಲಿಯೂ ದಿಕ್ಪಾಲಕರನ್ನು ಹೆಸರಿಸಿ ಬಲಿಪ್ರದಾನಮಾಡುವರು. ದಿಕ್ಪಾಲಕರನ್ನು ಹೀಗೆ ಪ್ರಾರ್ಥಿಸಲಾಗುವದು. "ಹೇ ಇಂದ್ರ, ಇಮಂ ಬಲಿಂ ಭಕ್ಷ, ಗೃಹಂ ರಕ್ಷ

ಯಜಮಾನಸ್ಯ ತುಷ್ಟಿಪುಷ್ಟಿವೃದ್ಧಿಸಿದ್ಧಿಆಯುರಾರೋಗ್ಯೈಶ್ವರ್ಯಾಭಿವೃದ್ಧಿಂ ಕುರು'' (ಎಲೈ ಇಂದ್ರದೇವತೆಯೆ, ಈ ಬಲಿ ಪೂಜೆ ಹಾಗೂ ನೈವೇದ್ಯಗಳನ್ನು ಸ್ವೀಕರಿಸು. ಮನೆಯನ್ನು ರಕ್ಷಿಸು; ಯಜಮಾನನಿಗೆ ತುಷ್ಟಿ, ಪುಷ್ಟಿ, ಆರೋಗ್ಯ-ಐಶ್ವರ್ಯಾದಿಗಳನ್ನು ಕೊಡುವವನಾಗು)-ಎಂದು ಹೇಳಿ ಎಂಟು ದಿಕ್ಕುಗಳಲ್ಲಿಯೂ ಆಯಾ ದಿಕ್ಪಾಲಕರ ಹೆಸರನ್ನು ಹೇಳಿ ಬಲಿಪ್ರದಾನವನ್ನು ನಡೆಸಲಾಗುವದು. ಅನಂತರ ವಾಸ್ತುದೇವತೆಗೂ ವಿಶೇಷಬಲಿಯನ್ನು ಅರ್ಪಿಸಿ ಈ ಕೆಳಗೆ ಕಂಡಂತೆ ಪ್ರಾರ್ಥಿಸಲಾಗುವದು :-

ಪೂಜಿತೋಽಸಿ ಮಯಾ ವಾಸ್ತೋ ಹೋಮಾದ್ಯೈರರ್ಚನೈಃ ಶುಭೈಃ ।
ಪ್ರಸೀದ ಪಾಹಿ ವಿಶ್ವೇಶ ದೇಹಿ ಮೇ ಗೃಹಜಂ ಸುಖಮ್ ॥
ವಾಸ್ತು ಮೂರ್ತೇ ನಮಸ್ತೇಽಸ್ತು ಭೂಶಯ್ಯಾಭಿರತ ಪ್ರಭೋ ।
ಮದ್ಗೃಹಂ ಧನಧಾನ್ಯಾದಿಸಮೃದ್ಧಂ ಕುರು ಸರ್ವದಾ ॥

"ಎಲೈ ವಾಸ್ತೋಷ್ಪತಿಯೆ'' ಶುಭಕರವಾದ ಹೋಮ, ಪೂಜೆ, ಬಲಿಪ್ರದಾನಾದಿಗಳಿಂದ ನೀನು ಆರಾಧಿಸಲ್ಪಟ್ಟಿರುವೆ. ನೀನು ಪ್ರಸನ್ನನಾಗು; ಎಲೈ ಜಗತ್ಪತಿಯೆ, ನಮ್ಮನ್ನು ಕಾಪಾಡು ; ಮನೆಯ ಸಂಬಂಧವಾದ ಎಲ್ಲಾ ಸುಖಗಳನ್ನೂ ಉಂಟುಮಾಡು. ನೆಲವನ್ನೇ ಹಾಸಿಗೆಯಾಗಿ ಮಾಡಿಕೊಂಡಿರುವ ವಾಸ್ತುಮೂರ್ತಿಯೆ, ಈ ನನ್ನ ಮನೆಯನ್ನು ಧನಧಾನ್ಯ ಸಮೃದ್ಧಿಯಿಂದ ಸದಾಕಾಲವೂ ಕೂಡಿರುವಂತೆ ಮಾಡು'' ಎಂದು ಈ ಪ್ರಾರ್ಥನೆಯ ಅಭಿಪ್ರಾಯವು. ಬಲಿಪ್ರದಾನವು ಪೂರೈಸಿದ ಅನಂತರ 'ಶಿವಂ ವಾಸ್ತು' ಎಂದು ಗಟ್ಟಿಯಾಗಿ ಮೂರು ಬಾರಿ ಘೋಷಿಸುವದು ಸಂಪ್ರದಾಯವಾಗಿದೆ.

## 15. ಪ್ರವೇಶೋತ್ಸವ

ಈ ರೀತಿಯಾಗಿ ಶಾಂತಿಕರ್ಮಗಳು ಪೂರೈಸಿದ ಅನಂತರ ಶುಭಮುಹೂರ್ತದಲ್ಲಿ ಯಜಮಾನನು ಪತ್ನೀಸಮೇತನಾಗಿ ಮಂಗಳವಾದ್ಯ, ಪೂರ್ಣಕುಂಭ, ಮಂಗಳದ್ರವ್ಯಗಳು, ಸುವಾಸಿನಿಯರು, ಬ್ರಾಹ್ಮಣರು, ಗೋವು,

ಕರು, ಹಾಲು, ತುಪ್ಪ, ಬೆಣ್ಣೆ, ಕಡಗೋಲು, ದೇವತಾಪ್ರತಿಮೆಗಳು, ಸಾಲಿಗ್ರಾಮ, ಶಿವಲಿಂಗಾದಿನಿತ್ಯಾರ್ಚನೆಯ ದೇವರುಗಳ ಸಮೇತ ಗೃಹದ ಮುಖ್ಯದ್ವಾರಕ್ಕೆ ಬಂದು ದೇಹಳಿ (ಹೊಸಿಲು) ಪೂಜೆಯನ್ನು ನೆರವೇರಿಸಿ ಮಂಗಳಾಷ್ಟಕಪಠನ ಪೂರ್ವಕವಾಗಿ ಗೋವುಕರುಗಳನ್ನು ಮೊದಲು ಪ್ರವೇಶ ಮಾಡಿಸಿ ಅನಂತರ ಎಲ್ಲರೊಡನೆ ತಾನು ಪ್ರವೇಶಮಾಡಬೇಕು. ನೇರಾಗಿ ದೇವತಾಪೂಜಾ ಫಲಪೂಜಾದಿಗಳನ್ನು ನೆರವೇರಿಸಬೇಕು. ಅನಂತರ ಬ್ರಾಹ್ಮಣ ಪೂಜೆಯನ್ನು ನೆರವೇರಿಸಿ ಕಲಶ-ವಸ್ತ್ರಪ್ರತಿಮಾದಿಗಳನ್ನು ದಾನಮಾಡಬೇಕು. ದಾನಕ್ಕೆ ಮುಂಚೆ ಕಲಶೋದಕಗಳಿಂದ ಬ್ರಾಹ್ಮಣರು ಸಪರಿವಾರನಾದ ಯಜಮಾನನಿಗೆ ಮಾರ್ಜನೆಮಾಡುವರು. ಆಗ್ಗೆ ಪಠಿಸುವ ಈ ಶ್ಲೋಕಗಳನ್ನು ಕೇಳಿರಿ:

ಸುರಾಸ್ತ್ವಾಮಭಿಷಿಂಚಂತು ಬ್ರಹ್ಮವಿಷ್ಣುಮಹೇಶ್ವರಾಃ ।<br>
ವಾಸುದೇವೋ ಜಗನ್ನಾಥಃ ತಥಾ ಸಂಕರ್ಷಣೋ ವಿಭುಃ ॥<br>
ಪ್ರದ್ಯುಮ್ನಶ್ಚಾನಿರುದ್ಧಶ್ಚ ಭವಂತು ವಿಜಯಾಯ ತೇ ।<br>
ಅಖಂಡಲೋಽಗ್ನಿರ್ಭಗವಾನ್ ಯಮೋ ವೈ ನಿರ್ಋತಿಸ್ತಥಾ ॥<br>
ವರುಣಃ ಪವನಶ್ಚೈವ ಧನಾಧ್ಯಕ್ಷಸ್ತಥಾ ಶಿವಃ ।<br>
ಬ್ರಹ್ಮಣಾ ಸಹಿತಾ ದೇವಾಃ ಸದಾ ತ್ವಾಂ ಪಾಲಯಂತು ತೇ ॥<br>
ಕೀರ್ತಿರ್ಲಕ್ಷ್ಮೀಃ ಧೃತಿರ್ಮೇಧಾ ತುಷ್ಟಿಃ ಶ್ರದ್ಧಾ ಕ್ಷಮಾ ಧೃತಿಃ ।<br>
ಬುದ್ಧಿರ್ಲಜ್ಜಾ ವಪುಃ ಶಾಂತಿಃ ಪುಷ್ಟಿಃ ಕಾಂತಿಶ್ಚ ಮಾತರಃ ॥<br>
ಏತಾಸ್ತ್ವಾಮಭಿಷಿಂಚಂತು ಧರ್ಮಪತ್ನ್ಯಃ ಸಮಾಗತಾಃ ।<br>
ಆದಿತ್ಯಶ್ಚಂದ್ರಮಾ ಭೌಮೋ ಬುಧೋ ಜೀವಸ್ಸಿತೋಽರ್ಕಜಃ ॥<br>
ಗ್ರಹಾಸ್ತ್ವಾಮಭಿಷಿಂಚಂತು ರಾಹುಕೇತುಸಮನ್ವಿತಾಃ ।<br>
ದೇವದಾನವಗಂಧರ್ವಯಕ್ಷರಾಕ್ಷಸಪನ್ನಗಾಃ ॥<br>
ಋಷಯೋ ಮುನಯೋ ಗಾವೋ ದೇವಮಾತರ ಏವ ಚ ।

ದೇವಪತ್ನ್ಯೋದ್ರುಮಾ ನಾಗಾ ದೈತ್ಯಾಶ್ಚಾಪ್ಸರಸಾಂ ಗಣಾಃ ||
ಅಸ್ತ್ರಾಣಿ ಸರ್ವಶಸ್ತ್ರಾಣಿ ರಾಜಾನೋ ವಾಹನಾನಿ ಚ |
ಔಷಧಾನಿ ಚ ರತ್ನಾನಿ ಕಾಲಸ್ಯಾವಯ ವಾಸ್ತಥಾ ||
ಸರಿತಃ ಸಾಗರಾಶ್ಶೈಲಾಸ್ತೀರ್ಥಾನಿ ಜಲದಾ ನದಾಃ |
ಏತಾನಿ ತ್ವಾಭಿಷಿಂಚಂತು ಧರ್ಮಕಾಮಾರ್ಥಸಿದ್ಧಯೇ ||
ವಿಘ್ನೇಶಃ ಕ್ಷೇತ್ರಪೋ ದುರ್ಗಾ ಲೋಕಪಾಲಾ ನವಗ್ರಹಾಃ |
ಸರ್ವಕಾಮಪ್ರದಾ ನಿತ್ಯಂ ಯಚ್ಛಂತು ತವ ಮಂಗಳಮ್ ||

ಭಾವಾರ್ಥ : ಬ್ರಹ್ಮವಿಷ್ಣು ಮಹೇಶ್ವರರೆಂಬ ದೇವತೆಗಳು ನಿನಗೆ ಅಭಿಷೇಕಮಾಡಲಿ; ಜಗತ್ಪತಿಯಾದ ವಾಸುದೇವನೂ ಸಂಕರ್ಷಣಪ್ರದ್ಯುಮ್ನ ಅನಿರುದ್ಧ-ಇವರುಗಳೂ ನಿನ್ನ ವಿಜಯಕ್ಕೆ ಕಾರಣರಾಗಲಿ ! ದೇವೇಂದ್ರನೂ ಪೂಜ್ಯನಾದ ಅಗ್ನಿಯೂ ಯಮ, ನಿರ್ಋತಿ, ವರುಣ, ವಾಯು, ಕುಬೇರ, ಈಶಾನ, ಮುಂತಾದ ಬ್ರಹ್ಮನೊಡಗೂಡಿದ ಎಲ್ಲಾ ದೇವತೆಗಳೂ ಯಾವಾಗಲೂ ನಿನ್ನನ್ನು ಕಾಪಾಡಲಿ ! ಕೀರ್ತಿ, ಲಕ್ಷ್ಮಿ, ಧೃತಿ, ಮೇಧೆ, ತುಷ್ಟಿ, ಶ್ರದ್ಧೆ, ಕ್ಷಮೆ, ಧೃತಿ, ಲಜ್ಜೆ, ಶಾಂತಿ, ವಪು (ಶರೀರಾಭಿಮಾನಿದೇವತೆ), ಪುಷ್ಟಿ, ಕಾಂತಿ-ಮುಂತಾದ ತಾಯಂದಿರುಗಳೂ ಧರ್ಮಪತ್ನಿಯರೂ ಆದ ದೇವಿಯರು ನಿನಗೆ ಅಭಿಷೇಕಮಾಡಲಿ! ಸೂರ್ಯ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ, ರಾಹು, ಕೇತು-ಈ ಗ್ರಹದೇವತೆಗಳು ನಿನ್ನನ್ನು ಅಭಿಷೇಕಮಾಡಲಿ! ಮತ್ತು ದೇವತೆಗಳು, ದಾನವರು, ಗಂಧರ್ವರು, ಯಕ್ಷರು, ರಾಕ್ಷಸರು, ಪನ್ನಗರು, ಋಷಿ ಮುನಿಗಳು, ಗೋವುಗಳು, ಸಪ್ತಮಾತೃಕೆಯರು, ದೇವಪತ್ನಿಯರು, ವೃಕ್ಷಗಳು, ನಾಗಗಳು, ದೈತ್ಯರು, ಅಪ್ಸರೆಯರಗುಂಪು, ಅಸ್ತ್ರಗಳು, ಎಲ್ಲಾ ಶಸ್ತ್ರಗಳು, ರಾಜರು ಗಳು, ವಾಹನಗಳು, ವನಸ್ಪತಿಗಳು, ರತ್ನಗಳು, ಹಗಲು, ರಾತ್ರಿ- ಮುಂತಾದ ಕಾಲದ ವಿಭಾಗಗಳು, ಸಮುದ್ರಗಳು, ಸಾಗರಗಳು, ಬೆಟ್ಟಗಳು- ಇವುಗಳೆಲ್ಲವೂ ಧರ್ಮ, ಅರ್ಥ, ಕಾಮಗಳ ಸಿದ್ಧಿಗಾಗಿ ನಿನಗೆ (ಅಭಿಷೇಕಮಾಡಲಿ.)

ಗಣಪತಿಯೂ ಕ್ಷೇತ್ರಪಾಲನೂ ದುರ್ಗೆ, ಲೋಕಪಾಲಕರು, ನವಗ್ರಹಗಳು ಇವರು ಎಲ್ಲಾ ಕಾಮಗಳನ್ನೂ ನಿನಗೆ ಕೊಟ್ಟು ಮಂಗಳವನ್ನುಂಟುಮಾಡಲಿ !

ಹೀಗೆ ಅಭಿಷೇಕವಾದ ಅನಂತರ ಯಜಮಾನನು ನೂತನವಸ್ತ್ರಾದಿಗಳನ್ನು ಧರಿಸಿ ಫಲಪೂಜೆಯನ್ನು ನೆರವೇರಿಸಿ ದಾನಧರ್ಮಗಳನ್ನು ನಡೆಯಿಸುವನು. ಮೊದಲು ಕಲಶವಸ್ತ್ರಪ್ರತಿಮಾದಿಗಳ ದಾನವೂ ಅನಂತರ ದಶದಾನಗಳೂ ಆಗುವವು. ಆಚಾರ್ಯಪೂಜೆ, ದಂಪತಿಪೂಜೆಗಳನ್ನೂ ಕೆಲವರು ನೆರವೇರಿಸುವರು. ಮುಂದೆ ಸಭಾಪೂಜೆ-ಫಲತಾಂಬೂಲ ವಿನಿಯೋಗ, ಬ್ರಾಹ್ಮಣ ಭೋಜನಾದಿಗಳು ನೆರವೇರಿದ ಅನಂತರ ಕಾರ್ಯವು ಸಮಾಪ್ತವಾಗುವದು.

## 16. ಉಪಸಂಹಾರ

ಈ ಚಿಕ್ಕಪುಸ್ತಕದಲ್ಲಿ ಗೃಹಪ್ರವೇಶದ ವಿಷಯವಾಗಿ ಮೊದಲು ಆಧ್ಯಾತ್ಮಿಕ ದೃಷ್ಟಿಯಿಂದ ವಿಚಾರಮಾಡಿ ಅನಂತರ ಧಾರ್ಮಿಕದೃಷ್ಟಿಯಿಂದ ವಿವೇಚಿಸಿ ಈ ಸಮಾರಂಭದ ವಿವರಗಳನ್ನೂ ಕೆಲವು ಮಟ್ಟಿಗೆ ತಿಳಿಸಲಾಗಿದೆ. ಮುಖ್ಯವಾಗಿ ಇಂಥ ಕರ್ಮಗಳಲ್ಲಿ ಯಜಮಾನನಿಗೆ ಶ್ರದ್ಧೆಯೂ ಔದಾರ್ಯವೂ ಇರಬೇಕು. ಗೃಹಗಳನ್ನು ನಿರ್ಮಿಸುವವರು ಕೆಲವರು ಅವು ಪೂರೈಸುವ ವೇಳೆಗೆ ನಿರುತ್ಸಾಹರಾಗಿ ಪ್ರವೇಶದ ಕಾರ್ಯವನ್ನು ಬಹಳ ಕಾರ್ಪಣ್ಯದಿಂದ ನೆರವೇರಿಸುವದೂ ಉಂಟು. ಅನುಕೂಲಸ್ಥರಾದರೆ ಅಂಥವರು ವೈದಿಕಕರ್ಮಗಳಿಗೆ ಹೆಚ್ಚು ಗಮನವನ್ನು ಕೊಡದೆ ಉದಾಸೀನತೆಯಿಂದ ನಡೆಯಿಸಿ ಲೌಕಿಕ ಸಮಾರಂಭಗಳಿಗೆ ಹಣವನ್ನು ನೀರಿನಂತೆ ಖರ್ಚುಮಾಡುವರು. ದಾನಧರ್ಮಗಳು, ವೈದಿಕರು, ವೇದೋಕ್ತಕರ್ಮಗಳ ಬಗ್ಗೆ ಅವರಿಗೆ ಆಸ್ಥೆಯಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಗೃಹಪ್ರವೇಶದ ಮಹತ್ತ್ವವನ್ನು ಸ್ವಲ್ಪಮಟ್ಟಿಗಾದರೂ ಜನರಿಗೆ ತಿಳಿಸಲು ಈ ಪುಸ್ತಕವು ಉಪಯೋಗವಾದೀತೆಂದು ಭಾವಿಸಲಾಗಿದೆ. ಯಜಮಾನನಿಗೆ ಸಲಹೆಕೊಡುವವರು, ಬಂಧುಮಿತ್ರರು, ಮುಂತಾದವರ ಪಾತ್ರವು ಇಲ್ಲಿ ಮುಖ್ಯವಾಗಿರುವದರಿಂದ ಮನೆಯನ್ನು ಕಟ್ಟದೆ ಇರುವವರೂ ಈ ಪುಸ್ತಕವನ್ನು ಓದಿದರೆ ತಮ್ಮ ಕಡೆಯವರಿಗೆ ಸರಿಯಾದ ಸೂಚನೆಗಳನ್ನು

ಕೊಡಲು ಉಪಯೋಗವಾದೀತು. ಮನೆ-ಎಂಬುದು ತಲೆತಲಾಂತರಗಳ ವರೆಗೂ ಅನುಭವಿಸಲ್ಪಡುವ ವಸ್ತುವಾದ್ದರಿಂದ ಮತ್ತು ಮನೆಯಲ್ಲಿ ವಾಸ ವಾಗಿರುವವರು ನೀರೋಗರಾಗಿ, ಆಯುಷ್ಯ, ಪ್ರಜೆ, ಧನ, ವಿದ್ಯೆ, ಸುಖಗಳಿಂದ ನಿತ್ಯವೂ ಕೂಡಿರಬೇಕಾದ್ದರಿಂದ ಮನೆಕಟ್ಟುವದು ಎಷ್ಟುಮುಖ್ಯವೋ ಗೃಹ ಪ್ರವೇಶಮಹೋತ್ಸವವನ್ನೂ ಅಷ್ಟೇ ವೀರ್ಯವತ್ತಾಗಿ ಮಾಡಬೇಕಾದದ್ದೂ ಅವಶ್ಯಕ. ಆದ್ದರಿಂದ ಇಂಥ ಸಂದರ್ಭದಲ್ಲಿ ಹಿರಿಯರು ಏನಾದರೂ ಧಾರ್ಮಿಕ ಕಾರ್ಯಗಳನ್ನು ಮಾಡಬೇಕೆಂದು ಸಂಕಲ್ಪಿಸಿದ್ದು ಅವು ನೆರವೇರದೆ ಇದ್ದಿದ್ದ ಪಕ್ಷದಲ್ಲಿ ಸಾಧ್ಯವಾದರೆ ಅಂಥವುಗಳನ್ನು ನೆರವೇರಿಸಿಬಿಡಬೇಕು. ಲೌಕಿಕ ಸಮಾರಂಭಗಳನ್ನು ಯಾವಾಗ ಬೇಕಾದರೂ ಕೈಗೊಳ್ಳಬಹುದು. ಆದರೆ ಧಾರ್ಮಿಕ ಸಮಾರಂಭಗಳನ್ನು ಮಾತ್ರ ಆಯಾ ಕಾಲದಲ್ಲೇ ಮಾಡಬೇಕು. ಅದೇ ಹೆಚ್ಚು ಶೋಭಿಸುತ್ತದೆ, ಮತ್ತು ವೀರ್ಯವತ್ತರವಾಗುತ್ತದೆ. ಆದ್ದರಿಂದ ಸರಿಯಾದ ವಿದ್ವಜ್ಜನರ ಮಾರ್ಗದರ್ಶನವನ್ನು ಪಡೆದು ಗೃಹಪ್ರವೇಶವನ್ನು ಶಾಸ್ತ್ರೀಯವಾಗಿ ನೆರವೇರಿಸಿದಲ್ಲಿ ದೇವತೆಗಳು ಸಂತೋಷಗೊಂಡು ಯಜಮಾನನಿಗೂ ಅವನ ಬಂಧು ಮಿತ್ರವರ್ಗದವರಿಗೂ ಸಕಲ ಸನ್ಮಂಗಳಪರಂಪರೆಗಳನ್ನೂ ಉಂಟು ಮಾಡುವರು.

ಈ ಗ್ರಂಥವನ್ನು ಬರೆಯಲು ಪ್ರೇರೇಪಿಸಿದ ಶ್ರೀ ಎಂ. ಜೆ. ಕೋದಂಡ ರಾಮಶ್ರೇಷ್ಠಿಯವರಿಗೆ ನನ್ನ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ ಮತ್ತು ಇದರಲ್ಲಿ ಮೂಡಿಬಂದಿರುವ ವಿಷಯಗಳಿಗೆ ನನ್ನ ಹೃದಯಾಂತರಾಳದಲ್ಲಿ ನೆಲೆಸಿ ಪ್ರೇರಕರಾಗಿರುವ ನನ್ನ ಪೂಜ್ಯಗುರುಗಳಾದ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಚರಣಸನ್ನಿಧಿಗೆ ನನ್ನ ಶಿರಸಾಷ್ಟಾಂಗವಂದನೆಗಳನ್ನು ಸಮರ್ಪಿಸಿ ಈ ಗ್ರಂಥವನ್ನು ಪೂರ್ಣ ಗೊಳಿಸುತ್ತೇನೆ.

॥ ಓಂ ತತ್ ಸತ್ ॥

## ಗೃಹಸ್ಥಪ್ರಶಂಸಾ

ಮಾನುಷ್ಯಂ ವರವಂಶಜನ್ಮ ವಿಭವೋ ದೀರ್ಘಾಯುರಾರೋಗ್ಯತಾ
ಸನ್ಮಿತ್ರಂ ಸುಸುತಃ ಸತೀ ಪ್ರಿಯತಮಾ ಭಕ್ತಿಶ್ಚ ನಾರಾಯಣೇ ।
ವಿದ್ವತ್ವಂ ಸುಜನತ್ವಮಿನ್ದ್ರಿಯಜಯಃ ಸತ್ಪಾತ್ರದಾನೇ ರತಿಃ
ತೇ ಪುಣ್ಯೇನ ವಿನಾ ತ್ರಯೋದಶಗುಣಾಃ ಸಂಸಾರಿಣಾಂ ದುರ್ಲಭಾಃ ॥

'ಮನುಷ್ಯನಾಗಿ ಹುಟ್ಟುವುದು, ಆದರಲ್ಲಿಯೂ-ಉತ್ತಮವಂಶದಲ್ಲಿ ಜನ್ಮವನ್ನು ಪಡೆಯುವುದು, ಐಶ್ವರ್ಯ, ದೀರ್ಘಾಯುಷ್ಯ, ಆರೋಗ್ಯ, ಉತ್ತಮವಾದ ಸ್ನೇಹಿತ, ವಿಧೇಯನಾದ ಮಗ, ಪ್ರೀತಿಪಾತ್ರಳಾದ ಹೆಂಡತಿ, ನಾರಾಯಣನಲ್ಲಿ ಭಕ್ತಿ, ವಿದ್ವತ್ತು(ವಿದ್ಯಾವಂತನಾಗಿರುವಿಕೆ), ಒಳ್ಳೆಯವನೆನಿಸಿಕೊಳ್ಳುವುದು, ಇಂದ್ರಿಯಗಳನ್ನು ಗೆದ್ದಿರುವದು, ಒಳ್ಳೆಯ ಪಾತ್ರರಲ್ಲಿ (ಯೋಗ್ಯರಲ್ಲಿ) ದಾನ ಮಾಡುವದರಲ್ಲಿ ಪ್ರೀತಿ-ಈ ಹದಿಮೂರು ಗುಣಗಳು ಪುಣ್ಯವಿಲ್ಲದೆ ದೊರಕಲಾರವು. ಸಂಸಾರಿಗಳಾದವರಿಗೆ ಇವು ದುರ್ಲಭವಾದವುಗಳೇ ಸರಿ.'

ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾ ನ ದುರ್ಭಾಷಿಣೀ
ಸನ್ಮಿತ್ರಂ ಸುಧನಂ ಸ್ವಯೋಷಿತಿ ರತಿಃ ಆಜ್ಞಾಪರಾ ಸೇವಕಾಃ ।
ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮೃಷ್ಟಾನ್ನಪಾನಂ ಗೃಹೇ
ಸಾಧೋಃ ಸಂಗಮುಪಾಸತೇ ಹಿ ಸತತಂ ಧನ್ಯೋ ಗೃಹಸ್ಥಾಶ್ರಮಃ ॥

"ಸಂತೋಷದಿಂದ ಕೂಡಿದ ಮನೆ, ಬುದ್ಧಿವಂತರಾದ ಮಕ್ಕಳು, ಕೆಟ್ಟ ಮಾತುಗಳನ್ನಾಡದಿರುವ ಹೆಂಡತಿ, ಉತ್ತಮ ಸ್ನೇಹಿತ, ನ್ಯಾಯವಾದ ಸಂಪಾದನೆ, ತನ್ನ ಪತ್ನಿಯಲ್ಲಿ ಮಾತ್ರವೇ ಆಸಕ್ತಿ, ಅಪ್ಪಣೆಯನ್ನು ನಡೆಸುವ ಸೇವಕರು, ಪ್ರತಿದಿನವೂ ಅತಿಥಿಸತ್ಕಾರ, ಈಶ್ವರಾರ್ಚನೆ, ಮೃಷ್ಟಾನ್ನಭೋಜನ, ಪಾನಗಳು, ಸಾಧುಸಂಗ- ಹೀಗೆ ಸದ್ಗೃಹಸ್ಥನು ಯಾವಾಗಲೂ ಇವುಗಳಿಂದ ಕೂಡಿರುವನು. ಆದ್ದರಿಂದ ಗೃಹಸ್ಥಾಶ್ರಮವು ಧನ್ಯ (ಸಾರ್ಥಕವಾದುದು)."

-ಸುಭಾಷಿತರತ್ನಭಾಂಡಾಗಾರ

15. ಪ್ರಬೋಧ ಸುಧಾಕರ : (ಪ್ರಕರಣಗಳು ಸಂಪುಟ 8) :
ಪ್ರಬೋಧ ಸುಧಾಕರ, ಪ್ರಶ್ನೋತ್ತರ ರತ್ನಮಾಲಿಕಾ,
ಶ್ರೀರಾಮಭುಜಂಗ ಪ್ರಯಾತ, ದತ್ತಲಹರೀ ಸಹಿತ) 118

16. ದೇವೀಮಾಹಾತ್ಮ್ಯ : (ದುರ್ಗಾಸಪ್ತಶತೀ - ಮೂಲ, ಭಾವಾರ್ಥ ಸಹಿತ) 116

17. ಗೀತಾಮನನ : (101 ಶ್ಲೋಕಗಳಲ್ಲಿ ಗೀತೆಯ ಸಂಗ್ರಹ - ವಿವರಣೆ) 48

18. ಗೃಹಪ್ರವೇಶ : (ಹೊಸದಾಗಿ ಮನೆಯನ್ನು ಕಟ್ಟಿದವರು
ಅನುಸರಿಸಬೇಕಾದ ಕ್ರಮಗಳ ಅರ್ಥ ವಿವರಣೆ, ಗೃಹಸ್ಥಧರ್ಮದ
ಪ್ರಾಶಸ್ತ್ಯದೊಡನೆ - ಅಧ್ಯಾತ್ಮತತ್ತ್ವ ವಿಚಾರ ಸಹಿತ) 42

19. ಸ್ತುತಿಪುಷ್ಪಾಂಜಲಿ : (ಭಕ್ತರೆಲ್ಲರೂ ಕಂಠಪಾಠಮಾಡಲು
ಯೋಗ್ಯವಾದ ಶ್ಲೋಕಗಳು, ಪ್ರತಿಪದಾರ್ಥಗಳ ಸಹಿತ) 72

## 3. ಅಧ್ಯಾತ್ಮ ಜಿಜ್ಞಾಸುಗಳಿಗೆ (ತತ್ತ್ವಪ್ರಧಾನರಾದ ಮುಮುಕ್ಷುಗಳಿಗೆ)

20. ಮಹಾನಾರಾಯಣೋಪನಿಷತ್ತು :
(ಕನ್ನಡದಲ್ಲಿ ವಿಸ್ತಾರವಾದ - ಅರ್ಥ ವಿವರಣೆ) 220

21. ತೈತ್ತಿರೀಯೋಪನಿಷದ್ಭಾಷ್ಯವಾರ್ತಿಕ : (ಮೂಲ-ಅನುವಾದ ಸಹಿತ) 200

22. ಆತ್ಮಪ್ರತಿಬೋಧ : (ಕೇನೋಪನಿಷತ್ತನ್ನು ಕುರಿತ ಪ್ರಬಂಧ) 48

23. ಸರಸ್ವತೀರಹಸ್ಯೋಪನಿಷಚ್ಚಂದ್ರಿಕೆ :
(ಈ ಹೆಸರಿನ ಉಪನಿಷತ್ತಿನ ಮೇಲೆ ಬರೆದಿರುವ ವಿವರಣೆ) 58

24. ಬೃಹದಾರಣ್ಯಕೋಪನ್ಯಾಸಮಂಜರಿ :
(ಶಾಂಕರಭಾಷ್ಯಾನುಸಾರವಾದ ಲಘು ವಿವರಣೆ) 340

25. ಛಾಂದೋಗ್ಯೋಪನ್ಯಾಸಮಂಜರಿ :
(ಶಾಂಕರ ಭಾಷ್ಯಾನುಸಾರವಾದ ಲಘು ವಿವರಣೆ) 338

26. ಶ್ವೇತಾಶ್ವತರೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 354

27. ತೈತ್ತಿರೀಯೋಪನ್ಯಾಸ ಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 83

28. ಐತರೇಯೋಪನ್ಯಾಸಮಂಜರಿ : (ಈ ಉಪನಿಷತ್ತಿನ ಲಘು ವಿವರಣೆ) 28

29. ಗೀತಾಶಾಸ್ತ್ರಾರ್ಥವಿವೇಕ : (ಶ್ರೀಶ್ರೀಗಳವರ ಸಂಸ್ಕೃತ ಗ್ರಂಥದ ಕಿರುಪರಿಚಯ) 52

# ದಿ. ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು
# (1928-2007)

ದಿ|| ಅಧ್ಯಾತ್ಮ ವಿದ್ಯಾಪ್ರವೀಣ ವೇ|| ಬ್ರ|| ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹ ಮೂರ್ತಿಗಳು ತಾ|| **2-6-1928**ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತ ಪ್ರಯೋಗ ವಿದ್ವಾಂಸರಾಗಿದ್ದ ವೇ|| ಶ್ರೀಕಂಠ ಘನಪಾಠಿಗಳು ಮತ್ತು ತಾಯಿಯವರು ಸೌ|| ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮ ಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ ''ಅಧ್ಯಾತ್ಮ ವಿದ್ಯಾ ನಿಲಯ''ದಲ್ಲಿ ಶ್ರೀಗಳಿಂದಲೇ 5 ವರ್ಷಕಾಲ ಶಾಂಕರಭಾಷ್ಯ ಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ ''ಅಧ್ಯಾತ್ಮವಿದ್ಯಾಪ್ರವೀಣ'' ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತ ಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿ ಕೊಡುತ್ತಾ ಜನಪ್ರಿಯರಾಗಿ ಶ್ರೀಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಮಾಸ ಪತ್ರಿಕೆಯ ಸಂಪಾದಕರಾದರು. 1997-99 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿ ಕೊಟ್ಟ ಶಾಂಕರಭಾಷ್ಯಾನುಸಾರ ''ಬ್ರಹ್ಮಸೂತ್ರಭಾಷ್ಯ'' ಮತ್ತು ''ಭಗವದ್ಗೀತಾ ಭಾಷ್ಯ'' ಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರದ ಪ್ರವಚನಗಳು ಸಿ.ಡಿ. (MP-3) ರೂಪದಲ್ಲಿ ಈಗಲೂ ಕಾರ್ಯಾಲಯದಲ್ಲಿ ಲಭ್ಯವಿದೆ. ಇಷ್ಟಲ್ಲದೆ ಶ್ರೀ ಮೂರ್ತಿಗಳು ವೇದ, ವೇದಾಂತ, ಸಂಪ್ರದಾಯ, ಸ್ತೋತ್ರ ಇತ್ಯಾದಿ ವಿಷಯಗಳ ಸುಮಾರು 29 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತೀವ್ರ ಅನಾರೋಗ್ಯ ನಿಮಿತ್ತ ತಾ|| **4-2-2007**ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾ ಕಾಲವೂ ಅತ್ಯಂತ ಭಕ್ತಿಯಿಂದ ಸ್ಮರಿಸುತ್ತದೆ.